ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಬಿಟ್ಟು ತಮ್ಮ ಸ್ಥಾನಕ್ಕೆ ಬರಲಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದೇ ವಿಷಯವನ್ನು ನಿಯಮ 69ರ ಕೆಳಗೆ ಚರ್ಚೆಗೆ ಅವಕಾಶ ಕೊಡುವಂತೆ ಕೋರಿ ನೋಟೀಸ್ ಕೊಡೋಣ. ನಾಳೆ ಅರ್ಧ ಗಂಟೆ ಚರ್ಚೆ ಮಾಡೋಣ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಅಪ್ರೋಪ್ರಿಯೇಟ್ ಟೈಮ್ ಯಾವಾಗ ಎನ್ನತಕ್ಕಂಥದ್ದು ಅದು ನಿಮಗೆ ಬಿಟ್ಟಿದ್ದುದು. ಈ ವಿಷಯ ಮಾತ್ರ ಚರ್ಚೆ ಆಗಲೇ ಬೇಕು. ಅಪ್ರೋಪ್ರಿಯೇಟ್ ಟೈಮ್ ಯಾವಾಗ? ಯಾವ ಹಂತದಲ್ಲಿ ಆಗಬೇಕು? ಅದರ ಬಗ್ಗೆ ಅಧ್ಯಕ್ಷರೇ ತೀರ್ಮಾನ ಮಾಡಿಕೊಳ್ಳಬೇಕು. ದಯಮಾಡಿ ಇದರ ಬಗ್ಗೆ ಮಾತ್ರ ಚರ್ಚೆ ಆಗಲೇಬೇಕು.

ಅಧ್ಯಕ್ಷರು: ಆಗಬಹುದು.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೆ, ನಿಯಮದಡಿಯಲ್ಲಿ ಅವರು ನೋಟೀಸನ್ನು ಕಳುಹಿಸಿಕೊಡಲಿ. ಕಳುಹಿಸಿ ಆದಮೇಲೆ ಸರ್ಕಾರದ ವತಿಯಿಂದ ಯಾವ ಯಾವ ಮಾಹಿತಿ ಬೇಕೋ ಸರ್ಕಾರದ ವತಿಯಿಂದ ಆ ಮಾಹಿತಿಯನ್ನು ನಾವು ಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ವಿಶೇಷ ಚರ್ಚೆ ಆಗಬೇಕೆಂದು ನಾವು ಒತ್ತಾಯ ಮಾಡುತ್ತಿದ್ದರೆ, ಅದರಿಂದ ಅಧ್ಯಕ್ಷರೂ ಕೂಡ ಅದಕ್ಕೆ ಒಪ್ಪಿದ್ದಾರೆ, ಆದ್ದರಿಂದ ಮಾನ್ಯ ನಾಣಯ್ಯನವರು 'ಆಗಬಹುದು' ಎಂದು ಹೇಳುವ ಬದಲು ಎಲ್ಲಾ ಮಾಹಿತಿಯನ್ನು ಕೊಡುತ್ತೇವೆ....

SRI M.C.NANAIAH:- At the appropriate time when the matter comes up whatever information you want, the government is prepared to give it.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅವರು 9 ಜನ ಬಂದಿರುವುದರಿಂದ ಈಗ ಅಂಥಹ ಸಮಸ್ಯೆ ಏನೂ ಬರುವುದಿಲ್ಲ.

ಶ್ರೀ ಬಿ.ಎಸ್‌ಯಡಿಯೂರಪ್ಪ: ಇನ್ನು ಈ ಬಗ್ಗೆ ಚರ್ಚೆ ಮಾಡುವುದಕ್ಕೇನೂ ಅಂಥಹ ಕಷ್ಟ ಆಗುವುದಿಲ್ಲ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಧರಣಿ ಕೈಬಿಟ್ಟು ತಮ್ಮ ಸ್ವಸ್ಥಾನಕ್ಕೆ ಮರಳಿದರು).

(6) ಅಧ್ಯಕ್ಷರ ಅಪ್ಪಣೆ ಮೇರಗೆ ಪ್ರಸ್ತಾಪಿಸಲ್ಪಟ್ಟ ವಿಷಯ

(ಅ) ಬೆಂಗಳೂರು ಮೈಸೂರು ಸೂಪರ್ ಹೈವೇಕುರಿತು.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯಲ್ಲಿ ಸುಮಾರು 2 ಸಾವಿರ ಕೋಟಿ ರೂಪಾಯಿ ವೆಚ್ಚದ 22 ಸಾವಿರ ಎಕರೆ ಭೂಮಿಯನ್ನು ಹಸ್ತಾಂತರ ಮಾಡುವಂಥ ದಿಶೆಯಲ್ಲಿ ವಿಧಾನಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆಯೇ, ಇಲ್ಲಿಯ ಸದಸ್ಯರಿಗೆ ಯಾವುದೇ ಮಾಹಿತಿಯನ್ನು ಕೊಡದೆಯೇ 'ಕಲ್ಯಾಣಿ ಗ್ರೂಪ್' ಎನ್ನುವಂತ ಖಾಸಗಿ ಕಂಪನಿಯ ಜೊತೆಯಲ್ಲಿ ಬೆಂಗಳೂರು ಮತ್ತು ಮೈಸೂರು ಸೂಪರ್ ಹೈ ವೇ ಬಗ್ಗೆ ಈಗಾಗಲೇ ಸರ್ಕಾರ' ಎಂ.ಓ.ಯು.ಗೆ ಸಹಿ ಮಾಡಿದೆ ಎನ್ನುವಂಥದ್ದು ಪತ್ರಿಕೆಯಲ್ಲಿ ಬಂದಿದೆ.

(ಶ್ರೀ ಬಿ.ಬಿ.ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಾನು ಸರ್ಕಾರಕ್ಕೆ ಏನು ಹೇಳುತ್ತಿದ್ದೇನೆಂದರೆ, ಬೆಂಗಳೂರು ಮೈಸೂರು ಸೂಪರ್ ಹೈವೇ ಮಾಡುವುದರ ಬಗ್ಗೆ ಬಿ.ಜೆ.ಪಿ.ಯವರ ವಿರೋಧ ಇಲ್ಲ. ಅಲ್ಲಲ್ಲಿ ಉಪನಗರಗಳನ್ನು ಮಾಡಬೇಕೆಂದು ನೀವೇನಾದರೂ ಅಪೇಕ್ಷೆಯನ್ನು ವ್ಯಕ್ತಪಡಿಸಿ ಮುಂದು ಹೋಗುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ನಮ್ಮ ಅಭ್ಯಂತರ ಏನು ಎಂದರೆ ನಿಮ್ಮ ಸರ್ಕಾರದ ಆಧ್ಯತೆ ಯಾವುದು? ವಿದ್ಯುತ್ ಉತ್ಪಾದನೆಯ ಕಡೆಗೆ ಕಣ್ಣುಮುಚ್ಚಿಕೊಂಡು ಇದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧ ಇಲ್ಲ. ಅಥವಾ ನೀರಾವರಿ ಯೋಜನೆಗಳ ಬಗ್ಗೆ ವಿಶೇಷ ಗಮನಕೊಡುವುದಕ್ಕೆ ತಯಾರಿಲ್ಲ. ತಾವು ಏನು ಉತ್ತರ ಕೊಡುತ್ತೀರೆಂದರೆ-ಸರ್ಕಾರದಿಂದ ಒಂದು ರೂಪಾಯಿಗಳಷ್ಟು ಕೂಡ ಖರ್ಚು ಇಲ್ಲ. ಎಲ್ಲಾ ಖರ್ಚನ್ನು ಸಹ 'ಕಲ್ಯಾಣಿ ಗುಂಪಿನವರೇ' ಮಾಡುತ್ತಾರೆ, ಈ ಬೆಂಗಳೂರು ಮೈಸೂರು ಸೂಪರ್ ಹೈವೇ ಮಾಡುತ್ತಾರೆ. ಸೆಟಲೈಟ್ ಟೌನ್‌ಗಳನ್ನು ಮಾಡುತ್ತಾರೆ, ಈ 22 ಸಾವಿರ ಎಕರೆ ಜಮೀನನ್ನು ಮಾತ್ರ ನಾವು ಇಂಡಸ್ಟ್ರೀಯಲ್ ಪರ್‌ಪಸ್‌ಗೋಸ್ಕರ ಅಕ್ವೈರ್ ಮಾಡಿಕೊಂಡು, ಈ ಹೌಸಿಂಗ್ ಪರ್‌ಪಸ್‌ಗೋಸ್ಕರ, ಸೂಪರ್ ಹೈವೇ ಮಾಡುವುದಕ್ಕೋಸ್ಕರ ಜಮೀನು ಕೊಡುತ್ತಿದ್ದೇವೆ ಅದರಲ್ಲಿ 7 ಸಾವಿರ ಎಕರೆ ಜಮೀನು ಸರ್ಕಾರದ್ದು ಸಹ ಸೇರಿದೆ, ಹಿಂದೆ ನಾವು ಟೆಂಡರ್ ಕರೆದಾಗ ಯಾರೂ ಸಹ ಈ ಸೂಪರ್ ಹೈವೇ ಮಾಡುವುದಕ್ಕೆ ಮುಂದೆ ಬರಲಿಲ್ಲ, ಹಿಂದೆ ಬಂದಿದ್ದಂಥ ಟೆಂಡರ್‌ದಾರರು - ಸರ್ಕಾರವೇ 20 ಪರ್ಸಂಟ್ ಹಣವನ್ನು ವಿನಿಯೋಗ ಮಾಡಬೇಕು, ಜಮೀನನ್ನು ಸರ್ಕಾರವೇ ಕೊಂಡು ಸಂಬಂಧಪಟ್ಟ ಕಂಪನಿಗೆ ಕೊಡಬೇಕೆಂದು ಹೇಳಿದರು. ಆದ್ದರಿಂದ 'ಕಲ್ಯಾಣಿ ಗ್ರೂಪ್‌ನವರೇ' ಮುಂದೆ ಬಂದಿರುವುದರಿಂದ ನಾವು ಇವರಿಗೆ 22 ಸಾವಿರ ಎಕರೆ ಜಮೀನನ್ನು ಕೊಟ್ಟು ಈ ಸೆಟ್‌ಲೈಟ್ ಟೌನ್‌ಗಳನ್ನು

ಮಾಡುವುದರ ಮೂಲಕ, ಈ ಮೈಸೂರು ಬೆಂಗಳೂರು ಸೂಪರ್ ಹೈವೇ ಮಾಡುತ್ತೇವೆಂದು ಹೇಳಿ, ತಾವು ಈಗಾಗಲೇ ನಿರ್ಧಾರ ಮಾಡುವಂಥ ಪರಿಸ್ಥಿತಿಗೆ ಬಂದಿದೆ. ಈ ರೀತಿ ಸೂಪರ್ ಹೈವೇ ಮಾಡುವಂಥ ಸಂದರ್ಭದಲ್ಲಿ ಟೋಲ್ ಕಲೆಕ್ಷನ್ ಮಾಡುವುದನ್ನು ನಾನು ಕೇಳಿದ್ದೇನೆ. ಅದು ಅವನಿಗೆ ಲಾಸ್ ಆಗದ ಹಾಗೆ, ಅವನು ಪ್ರಾಫಿಟ್‌ನಲ್ಲಿ ಇರಬೇಕು ಎನ್ನುವ ವ್ಯವಸ್ಥೆಯನ್ನು ಮಾಡತಕ್ಕಂಥದ್ದನ್ನು ನಾನು ಕೇಳಿದ್ದೇನೆ. ಆದರೆ ಆ ನೆಪದಲ್ಲಿ ಸುಮಾರು 22 ಸಾವಿರ ಎಕರೆ ಖಾಸಗಿ ಮತ್ತು ಸರ್ಕಾರದ ಜಮೀನನ್ನು ಸರ್ಕಾರವೇ ಮುಂದೆ ನಿಂತುಕೊಂಡು ಅಕ್ವೈರ್ ಮಾಡಿ ಕೊಡುವುದಕ್ಕೆ ಹೊರಟಿರುವಂಥದ್ದು ಬಹುಶಃ ಇದು ನಮ್ಮ ದೇಶದಲ್ಲಿ ಮಾತ್ರ ಅಲ್ಲ, ಪ್ರಪಂಚದ ಇತಿಹಾಸದಲ್ಲಿ ಯಾವುದೇ ದೇಶದಲ್ಲಿ ಎಲ್ಲೂ ಈ ರೀತಿ ನಡೆದಿಲ್ಲ ಎಂದು ನಾನು ಹೇಳುತ್ತೇನೆ. ಇದೊಂದು ದೊಡ್ಡ ಗೋಲ್‌ಮಾಲ್ ವ್ಯವಹಾರ, ಲ್ಯಾಂಡ್ ಗ್ರಾಬಿಂಗ್ ವ್ಯವಹಾರ. ಇತಿಹಾಸದಲ್ಲಿ ಇಷ್ಟು ದೊಡ್ಡ ಪ್ರಮಾಣದ ಭ್ರಷ್ಟ ಹಗರಣ ಇನ್ನೊಂದು ನಡೆಯುವುದಕ್ಕೆ ಸಾಧ್ಯವಿಲ್ಲವೆಂದು ಜನರು ಮಾತನಾಡುವುದಕ್ಕೆ ಮುಂಚೆ ಈ ಸದನದಲ್ಲಿ ಇದನ್ನು ಪ್ರಸ್ತಾಪ ಮಾಡಿದಿದ್ದರೆ ಮುಂದೆ ಇಲ್ಲಿ ಆಯ್ಕೆಯಾಗಿ ಬರುವಂಥ ಶಾಸಕರಿಗೆ 30 ವರ್ಷಗಳು ಆದಮೇಲೆ ಮುಂದಿನ ಪೀಳಿಗೆ ನಮಗೆ ಶಾಪ ಹಾಕಬಾರದೆಂಬ ದೃಷ್ಟಿಯಿಂದ ನಾನು ಇವತ್ತು ಈ ಪ್ರಸ್ತಾಪವನ್ನು ಮಾಡುತ್ತೇನೆ. ನನ್ನ ವಿಚಾರವೇನೆಂದರೆ, ಈ ರೀತಿಯ ಯೋಜನೆಗಳನ್ನು ಕೈಗೊಳ್ಳುವ ಮುನ್ನ ಅದು ರಾಜ್ಯಕ್ಕೆ ದೇಶಕ್ಕೆ ಲಾಭದಾಯಕವಾಗಿರಬೇಕು, ಅದರಲ್ಲಿ ಪಾರದರ್ಶಕತೆ ಇರಬೇಕು, ಪರಿಸರ ಕಾಳಜಿ ಇರಬೇಕು. ಈ ಹಿನ್ನೆಲೆಯಲ್ಲಿ ತಾವು ಇದನ್ನು ಯೋಚನೆ ಮಾಡಬೇಕಾಗುತ್ತದೆ. ನನ್ನ ಆಕ್ಷೇಪಣೆ ಏನೆಂದರೆ, ಈ 110+20=130 ಕಿಲೋಮೀಟರ್ ರಸ್ತೆ, ಮೈಸೂರ್ ಸೂಪರ್ ಹೈವೇ ಮಾಡುವ ಕಾಲದಲ್ಲಿ ನೀವು ಟೆಂಡರ್ ಕರೆದಿರಿ. ಆಗ ಕೆಲವು ಕಂಟ್ರಾಕ್ಟರುಗಳು ಕೆಲವು ಕಂಡೀಷನ್‌ಗಳನ್ನು ಹಾಕಿದರು. ಹಾಗಾಗಿ ಯಾರೂ ಮುಂದೆ ಬರಲಿಲ್ಲ. ಆ ಸಮಯದಲ್ಲಿ ನೀವು ಏನು ಮಾಡಬೇಕಾಗಿತ್ತು? ಈ ಸ್ಯಾಟಲೈಟ್ ಟೌನನ್ನು ಈ ಹೈವೇಗೆ ಏತಕ್ಕೆ ಲಿಂಕ್ ಮಾಡುತ್ತೀರಿ? ನೀವು 30 ವರ್ಷ ಟೋಲ್ ಕಲೆಕ್ಷನ್ ಮಾಡುವುದಕ್ಕೆ ಅವನಿಗೆ ಲೀಸ್ ಕೊಡುತ್ತೀರಿ. ಅದು ಲಾಭವಾಗುವುದಿಲ್ಲ, ಲುಕ್ಸಾನಾಗುತ್ತದೆಂದು ನಿಮಗೆ ಮನವರಿಕೆಯಾದರೆ 30 ವರ್ಷ ಇಲ್ಲದಿದ್ದರೆ 40 ವರ್ಷ, 50 ವರ್ಷ ಕೊಡಿ. ಬೆಂಗಳೂರು-ಮೈಸೂರು ಮಧ್ಯೆ ವಾಹನ ಸಂಚಾರ ಒತ್ತಡ ಜಾಸ್ತಿ ಇದೆ ಎಂದರೆ ಮೈಸೂರು-ಬೆಂಗಳೂರು ನಡುವೆ 2-3 ಎಲೆಕ್ಟ್ರಿಕ್ ರೈಲುಗಳನ್ನು ಬಿಡುವುದಕ್ಕೆ ಕೇಂದ್ರಕ್ಕೆ ಒತ್ತಾಯ ಮಾಡೋಣ. ಅಥವಾ ಸೂಪರ್ ಹೈವೇ ಆಗಬೇಕೆಂದರೆ ಈ ಸ್ಯಾಟಲೈಟ್ ಟೌನ್ ಅನ್ನು ಅದಕ್ಕೆ ಲಿಂಕ್ ಮಾಡುವ ಪ್ರಯತ್ನ ಏತಕ್ಕೆ ಮಾಡುತ್ತೀರಿ? ಕಲ್ಕತ್ತದಲ್ಲಿ ಸೆಟಲೈಟ್ ಸಿಟಿ ಎಂದು ಮಾಡಿದ್ದಾರೆ. ಹೌರಾದ್ ಎಂದು ಒಂದು ಹೊಸ ಸೇತುವೆ ಮಾಡಿದ್ದಾರೆ. ಮುಂಬೈನಲ್ಲಿ ನಯಿ ಮುಂಬೈ ಎಂಬ ಯೋಜನೆ ಮಾಡಿದ್ದಾರೆ. ಅದನ್ನೆಲ್ಲಾ ತರಿಸಿ ಸ್ಟಡಿ ಮಾಡಿದ್ದೀರೋ ಪ್ರಪಂಚದಲ್ಲಿ ಎಲ್ಲಿಯಾದರೂ ಈ ರೀತಿ ಸೂಪರ್ ಹೈವೇ ಮಾಡುವ ಪ್ರಯತ್ನ ಮಾಡಿದ್ದಾರೆಯೆ? ಸೂಪರ್ ಹೈವೇ

ಮಾಡುವ ನೆಪದಲ್ಲಿ ಎಷ್ಟು ಜಾಗ ಬೇಕು? ಆ ನೆಪದಲ್ಲಿ 16 ಸಾವಿರ ಎಕರೆ ಜಮೀನನ್ನು 5 ಸ್ಯಾಟಲೈಟ್ ಟೌನ್ ಮಾಡುವುದಕ್ಕೆ ನೀವು ಹಸ್ತಾಂತರ ಮಾಡುವುದಕ್ಕೆ ಹೊರಟಿದ್ದೀರಿ. ನೀವು ಎಂ.ವೈ.ಯುಗೆ ಸಹಿ ಮಾಡಿದ್ದೀರಿ. ಯಾವುದೋ ಪಂಚತಾರಾ ಹೋಟೆಲ್‌ನಲ್ಲಿ ಕುಳಿತುಕೊಂಡು ಪರಸ್ಪರ ಒಂದೊಂದು ಎಂ.ವೈ.ಯು.ಗೆ ಸಹಿ ಮಾಡಿಕೊಂಡು ನಾವು 22 ಸಾವಿರ ಎಕರೆ ಕೊಡುತ್ತೇವೆ, ನೀವು 5 ಸ್ಯಾಟಲೈಟ್ ಟೌನ್ ಮಾಡು, ನೀನು ಒಂದು ರಸ್ತೆ ಮಾಡು, ನಿನ್ನ ಖರ್ಚಿನಲ್ಲಿ ಎಲ್ಲಾ ಮಾಡಿಬಿಡು ಎಂದು ನೀವು ನೀವೇ ಕುಳಿತುಕೊಂಡು ವ್ಯವಹಾರ ಮಾಡುವುದಾದರೆ ನಾನು ಹೇಳುತ್ತೇನೆ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಅವ್ಯವಹಾರ ಇದರಲ್ಲಿ ನಡೆಯುವುದು ಇದೆ. ಈಗಾಗಲೇ ಕುಳಿತುಕೊಂಡು ಸಾಕಷ್ಟು ತಿಂದಿದ್ದೀರಲ್ಲಾ. ಎಂದು ಜನರು ಮಾತನಾಡುತ್ತಿದ್ದಾರೆ ಒಬ್ಬೊಬ್ಬರು ಸಚಿವರು ಉನ್ನತಾಧಿಕಾರಿಗಳು ಇದರಲ್ಲಿ ಹಣ ಇನ್‌ವೆಸ್ಟ್ ಮಾಡುವುದಕ್ಕೆ ಹೊರಟಿದ್ದಾರೆಂದು. ಬಹಳ ದೊಡ್ಡ ಪಿತೂರಿಯನ್ನು ಮಾಡಿ ಇವತ್ತು ಅದನ್ನು ಕಾರ್‍ಯರೂಪಕ್ಕೆ ಬರುವಂಥ ಕೆಲಸವನ್ನು ನೀವು ಮಾಡಿದ್ದೀರಿ. ನಾನು ಈ ಸಂದರ್ಭಧಲ್ಲಿ ಒಂದೆರಡು ಪ್ರಶ್ನೆಗಳನ್ನು ತಮ್ಮ ಮುಂದೆ ಇಡುವುದಕ್ಕೆ ಇಷ್ಟ ಪಡುತ್ತೇನೆ. ಒಂದು ಕಿಲೋಮೀಟರ್ ರಸ್ತೆ ಮಾಡುವುದಕ್ಕೆ ಎಷ್ಟು ಹಣ ಬೇಕೆಂದು ನೀವು ಅಂದಾಜು ಮಾಡಿಸಿದ್ದೀರಿ? ಹಿಂದೆ ಶ್ರೀ ಶಿವಾನಂದ ಕೌಜಲಗಿಯವರು ಸಚಿವರಾಗಿದ್ದಾಗ ಒಂದು ಹೇಳಿಕೆ ಕೊಟ್ಟರು. ಈ ಯೋಜನೆಗಳಿಗೆ ಷೇರುಗಳ ಮೂಲಕ ಹಣ ಸಂಗ್ರಹಿಸಿ ಈ ಯೋಜನೆಗೆ ವಿನಿಯೋಜಿಸಲು ಕಲ್ಯಾಣಿ ಗ್ರೂಪ್ ನಿರ್ಧರಿಸಿದೆ ಎಂದು ಹೇಳಿದ ಅವರು ರಸ್ತೆಯನ್ನು ಸಂಪೂರ್ಣವಾಗಿ ಕಾಂಕ್ರಿಟ್ ಮತ್ತು ಸಿಮೆಂಟ್‌ನಿಂದ ನಿರ್ಮಿಸಲಾಗುವುದು, ಇದಕ್ಕೆ ಒಂದು ಕಿಲೋಮೀಟರ್‌ಗೆ $1\,^1/_2$ – 2 ಕೋಟಿ ರೂಪಾಯಿ ಆಗುತ್ತದೆಂದು ಹೇಳಿದ್ದರು. ಇವತ್ತು ನೀವು 4 ಕೋಟಿ ಖರ್ಚಾಗುತ್ತದೆಂದು ಹೇಳುತ್ತೀರಿ. ಮ್ಯಾಕ್ಸಿಮಂ ಅಂದರೆ 500 ಕೋಟಿ ರೂಪಾಯಿ ಖರ್ಚಾಗಬಹುದು. ಈ 400 ಕೋಟಿ ರೂಪಾಯಿ ಖರ್ಚು ಮಾಡುವಂತೆ ಈ ಯೋಜನೆಗೆ 210+130 ಕಿಲೋಮೀಟರ್ ರಸ್ತೆ ಮಾಡುವುದಕ್ಕೆ ಎಷ್ಟು ಎಕರೆ ಜಮೀನು ಬೇಕು? ಎಷ್ಟು ದುಡ್ಡು ಬೇಕು? ಈ ಹಣವನ್ನು ಅವರ ಮನೆಯಿಂದ ತರುತ್ತಾರೆಯೇ? ಇಲ್ಲ. ಇಲ್ಲೇ ಜನರಿಂದ ಷೇರು ಸಂಗ್ರಹ ಮಾಡುತ್ತಾರೆ. ಕೃಷ್ಣ ಭಾಗ್ಯ ಜಲ ನಿಗಮಕ್ಕೆ ನೀವು ಹಣ ಸಂಗ್ರಹ ಮಾಡಿದ್ದೀರಿ. ಮೈಸೂರು ಸೂಪರ್ ಹೈವೇ ಮಾಡುವುದಾದರೆ ಅದಕ್ಕೆ ಸರ್ಕಾರ ಬೇಕಾದರೆ ಮುಂದೆ ನಿಂತು ಮಾಡಬಹುದು. ಅದು ಬಿಟ್ಟು ಇವತ್ತು ಈ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ. ಅದಕ್ಕಾಗಿ ನಾನು ನಿಮ್ಮಿಂದ ಏನು ವಿವರ ಬಯಸುತ್ತೇನೆಂದರೆ ಈ 22 ಸಾವಿರ ಎಕರೆಯಲ್ಲಿ 7 ಸಾವಿರ ಎಕರೆ ಜಮೀನು ಸರ್ಕಾರಕ್ಕೆ ಸೇರದೆ ಇರತಕ್ಕದ್ದು ಇದೆ. ನೀವು ಬೇರೆಯವರಿಂದ ಒಂದು ಲಕ್ಷಕ್ಕೆ ಒಂದು ಎಕರೆ ಜಮೀನು ಕೊಂಡುಕೊಂಡರೂ ಸಹ ನಿಮ್ಮ ಸರ್ಕಾರ ಏಳು ಸಾವಿರ ಎಕರೆ ಸೇರಿಸಿದರೆ ಸುಮಾರು 220 ಕೋಟಿ ರೂಪಾಯಿಗೆ ಅವನಿಗೆ ಜಮೀನು ಸಿಗುತ್ತದೆ. ಅಕಸ್ಮಾತ್ ಎರಡು ಲಕ್ಷ ಖರ್ಚು ಮಾಡುತ್ತೇವೆಂದರೆ 440 ಕೋಟಿ ಆಗುತ್ತದೆ. ಒಂದು ಎಕರೆ ಜಮೀನು ತೆಗೆದುಕೊಂಡು ಡೆವಲಪ್ ಮಾಡಿ

ಒಂದು ಚದುರ ಅಡಿಗೆ 300 ರೂಪಾಯಿನಂತೆ ಅವನು ಮಾಡಿದರೂ ಒಂದೂ ಮುಕ್ಕಾಲು ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಅವನು ನಾಳೆ ಮನೆ ಕಟ್ಟಿ ಸ್ಯಾಟಲೈಟ್ ಟೌನ್ ಮಾಡಿ ಮಾರುವುದಕ್ಕೆ ಹೊರಡುವಂಥ ಸಂದರ್ಭದಲ್ಲಿ ಅಷ್ಟು ಬೆಲೆ ಬಾಳುತ್ತದೆ. ನೀವು ಯಾವಾಗ ಕೊಡುತ್ತೀರಿ ಅದರ ಹತ್ತು ವರ್ಷಗಳ ನಂತರ ಆ ಬೆಲೆ ಬಾಳುತ್ತದೆ. ಬಹುಶಃ ನಮ್ಮ ದೇಶದ ಇತಿಹಾಸದಲ್ಲಿ ಈ ರೀತಿ ಒಂದು ಸ್ಯಾಟಲೈಟ್ ಮಾಡುವುದಕ್ಕೋಸ್ಕರ, ರಸ್ತೆ ಮಾಡುವ ನೆಪದಲ್ಲಿ ಕೊಡುವುದಕ್ಕೆಯಾರೂ ಇದುವರೆಗೆ ಅವಕಾಶ ಕೊಟ್ಟಿಲ್ಲ. ಜಮೀನು ಅವನು ಕೊಂಡುಕೊಳ್ಳುತ್ತಾನೆ. ಇವರು ಜಮೀನನ್ನು ಇಂಡಸ್ಟ್ರಿಯಲ್ ಪರ್ಪಸ್‌ಗೆ ಅಕ್ವೈರ್‌ಮಾಡಿಕೊಂಡು ಹೌಸಿಂಗ್ ಪರ್ಪಸ್‌ಗೆ ಕೊಡುತ್ತಾರೆ. ಅವನಿಗೆ ನೌಕರಿ ಕೊಡುತ್ತೇನೆ, ಮನೆ ಕೊಡುತ್ತೇನೆಂದು ಹೇಳಿ ನಾಳೆ ದಿವಸ ಕೊಡಲೂ ಬಹುದು. ಇನ್ನು ಹತ್ತು ವರ್ಷದಲ್ಲಿ ಮೈಸೂರ್ ಸೂಪರ್ ಹೈವೇ ಆದರೆ ಒಂದು ಎಕರೆ ಜಮೀನಿಗೆ ಒಂದು ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಆದರೆ ನಿಮಗೆ ಏತಕ್ಕೆ ಇಂಟರೆಸ್ಟ್? ಸೂಪರ್ ಹೈವೇ ಮಾಡಬೇಕು ಅಲ್ಲಿ ಒಳ್ಳೆಯ ಪ್ರಗತಿ ಕಾಣಬೇಕೆಂದರೆ ಬೇರೆ ಒಳ್ಳೆಯ ಯೋಜನೆಗಳನ್ನು ಮಾಡುವುದಕ್ಕೆ ಯೋಚನೆ ಮಾಡದೆ 7-8 ವರ್ಷಗಳಿಂದ ನಿಮ್ಮ ಸಂಚು ನಡೆಯುತ್ತಿದೆ ಎಂದರೆ ತಪ್ಪಾಗಲಾರದು. ಸೂಪರ್ ಹೈವೇ ಮಾಡುತ್ತೇವೆಂದು ಹೇಳುವುದು, ಟೆಂಡರ್ ಕರೆಯುವುದು, ಯಾರೂ ಬರಲಿಲ್ಲವೆಂದು ಹೇಳುವುದು, ಕೆಲವು ಕಂಡೀಷನ್ ಹಾಕಿದರು ಎಂದು ಅದನ್ನು ದಾಖಲೆ ಮಾಡಿ ತೋರಿಸಿಕೊಳ್ಳುವುದು. ಅದಾದಮೇಲೆ 7 ಟೌನ್‌ಶಿಫ್ ಪ್ರೊಪೋಸ್ ಮಾಡುವುದು, ಆಮೇಲೆ 5-6 ಮಾಡುತ್ತೇವೆಂದು ಹೇಳುವುದು. ನೀವು ಅಕಸ್ಮಾತ್ ಪ್ರಾಮಾಣಿಕರಿದ್ದರೆ ರಾಜ್ಯದ ಹಿತದೃಷ್ಟಿಯಿಂದ ಇದನ್ನು ಮಾಡಬೇಕೆಂದಿದ್ದರೆ ಗ್ಲೋಬಲ್ ಟೆಂಡರ್ ಕರೆಯಬೇಕಾಗಿತ್ತು. ಗ್ಲೋಬಲ್ ಟೆಂಡರ್ ಕರೆದು ಒಂದು ಟೌನ್‌ಶಿಫ್‌ಗೆ ಇಷ್ಟು ಎಕರೆ ಕೊಡುತ್ತೇವೆಂದರೆ ನಮ್ಮ ಅಭ್ಯಂತರವಿಲ್ಲ. 110 ಕಿಲೋಮೀಟರ್ ರಸ್ತೆಗೆ ಎಷ್ಟು ಎಕರೆ ಜಮೀನು ಬೇಕು? ಇಲ್ಲಿಂದ ಮೈಸೂರಿಗೆ 500 ಎಕರೆ ಬೇಕೇ? ಒಂದು ಸಾವಿರ ಎಕರೆ ಬೇರೆ, 5 ಸಾವಿರ ಎಕರೆ ಬೇಕೆ? ಸರ್ಕಾರ 700 ಎಕರೆ ಜಮೀನನ್ನು ಜನರಿಂದ ಅಕ್ವೈರ್ ಮಾಡಿ ಸೂಪರ್ ಹೈವೇಗೆ ಕೊಡುವುದಕ್ಕೆ ಅವಕಾಶ ಮಾಡಿಕೊಡುವುದಾದರೆ ಈ ಸ್ಯಾಟಲೈಟ್ ಟೌನಿಗೆ ಏತಕ್ಕೆ ಜಾಯಿನ್ ಮಾಡುತ್ತೀರಿ? ಸ್ಯಾಟಲೈಟ್ ಟೌನಿಗೆ ಬೇರೆ ಟೆಂಡರ್ ಕರೆಯಿರಿ, ಮೈಸೂರ್ ಸೂಪರ್ ಹೈವೇಗೆ ಬೇರೆ ಟೆಂಡರ್ ಕರೆಯಿರಿ ಆ ರೀತಿ ನೀವು ಕರೆಯಲಿಲ್ಲ. ಯಾರೂ ಸೂಪರ್ ಹೈವೇ ಮಾಡುವುದಕ್ಕೆ ಮುಂದೆ ಬರಲಿಲ್ಲವೆಂದು ಪಂಚತಾರಾ ಹೋಟೆಲ್‌ನಲ್ಲಿ 4 ಜನ ಕುಳಿತುಕೊಂಡು ಎಂ.ವೈ.ಯು.ಗೆ ಪರಸ್ಪರ ಸಹಿ ಮಾಡಿಕೊಂಡು 22 ಸಾವಿರ ಎಕರೆ ಜಮೀನು ಪರಭಾರೆ ಮಾಡಿ ಯಾರನ್ನೋ ಕೋಟ್ಯಾಧಿಪತಿಯಾಗಿ ಮಾಡುವುದಕ್ಕೆ ಹೊರಟಿರುವಂಥ ನಿಮ್ಮ ಸಂಚು ಇದರಲ್ಲಿ ಅಡಗಿದೆ ಎಂದು ಜನರು ಮಾತನಾಡುತ್ತಿದ್ದಾರೆಂದು ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ಯಾವ ಕಾರಣಕ್ಕೂ ಸಹ ಗ್ಲೋಬಲ್ ಟೆಂಡರ್ ಕರೆಯದೆ 5 ಹೊಸ ಸ್ಯಾಟಲೈಟ್ ಟೌನ್

ಮಾಡುವ ಆಗತ್ಯವಿಲ್ಲ. ನಿಮಗೆ ಆದ್ಯತೆ ಅದಲ್ಲ. ರಸ್ತೆ ಮಾಡಲೇಬೇಕೆಂದರೆ ಯಾವ ರೀತಿ ಮಾಡಬೇಕೆಂದು ಯೋಚನೆ ಮಾಡೋಣ. ಯಾರೂ ಮಾಡುವುದಕ್ಕೆ ಮುಂದೆ ಬಾರದಿದ್ದರೆ ಸರ್ಕಾರವರೇ ಮಾಡುವುದಕ್ಕೆ ಮುಂದೆ ಹೋಗೋಣ. ನೀವು ಜನರ ಮುಂದೆ ಏನು ತೋರಿಸುತ್ತಿದ್ದೀರಿ? ಒಂದು ಪೈಸೆ ಸರ್ಕಾರದಿಂದ ಖರ್ಚಾಗಬೇಕಾಗಿಲ್ಲ, ಎಲ್ಲವನ್ನೂ ಅವನೇ ವಿನಿಯೋಗ ಮಾಡುತ್ತಾನೆ, ಅಂದರೆ ಅವನ ಮನೆಯಿಂದ ತರುತ್ತಾನೆಯೇ? ಹಣ ಸಂಗ್ರಹ ಮಾಡುವುದು ಷೇರ್ ರೂಪದಲ್ಲಿ. ನಮ್ಮದೇ ತಲೆ ಬೋಳಿಸಿ ಅವನನ್ನು ಕೋಟ್ಯಾಧಿಪತಿ ಮಾಡುವುದಕ್ಕೆ ಹೊರಟಿದ್ದೀರಿ. ಎರಡನೆಯದಾಗಿ, ಹಿಂದಿನ ಸರ್ಕಾರಕ್ಕೆ ಇದರ ಜವಾಬ್ದಾರಿ ಇತ್ತು. ಆಗ ನಿಮ್ಮದೇ ಜವಾಬ್ದಾರಿಯುತವಾದ ಸರ್ಕಾರ ಇತ್ತು. ಆ ಸಂದರ್ಭಧಲ್ಲಿ ಶ್ರೀ ಶಿವಾನಂದ ಕೌಜಲಗಿಯವರು ಲೋಕೋಪಯೋಗಿ ಸಚಿವರಾಗಿದ್ದರು. ಆಗ ಅವರು ಒಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ನವೆಂಬರ್ 8, 1996-ಬೆಂಗಳೂರು-ಮೈಸೂರು ಸೂಪರ್ ಹೈವೇ ಅಸ್ತು. ಸ್ಯಾಟಲೈಟ್ ಟೌನ್ ರಸ್ತೆ ಸೇರಿ 1556 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಹೇಳಿದ್ದಾರೆ. ನೀವು ಎರಡು ಸಾವಿರ ಕೋಟಿ ರೂಪಾಯಿಗಳು ಬೇಕೆಂದು ಹೇಳುತ್ತೀರಿ. ಅವತ್ತು ಅವರು 17184 ಎಕರೆ ಜಮೀನು ಬೇಕೆಂದು ಹೇಳಿದ್ದರು. ಇವತ್ತು ನೀವು 22 ಸಾವಿರ ಎಕರೆ ಕೊಡುವುದಕ್ಕೆ ಹೊರಟಿದ್ದೀರಿ. ಇದು ಯಾವುದೂ ಸಹ ಈ ಮನೆಯ ಸದಸ್ಯರಿಗೆ ವಿವರಗಳು ಗೊತ್ತಿಲ್ಲ. ಅದಕ್ಕಾಗಿ ನಾನು ಒತ್ತಾಯ ಮಾಡುತ್ತೇನೆ, ಫೀಸಿಬಿಲಿಟಿ ರಿಪೋರ್ಟ್ ಏನಿದೆ, ಡೀಟೈಲ್ಡ್ ಪ್ರಾಜೆಕ್ಟ್ ರಿಪೋರ್ಟ್ ಏನಿದೆ, ಹೈ ಪವರ್ ಕಮಿಟಿ ರಿಪೋರ್ಟ್ ಏನಿದೆ, ಅಗ್ರಿಮೆಂಟ್ ಏನೇನು ಮಾಡಿಕೊಂಡಿದ್ದೀರಿ ಆ ಎಲ್ಲಾ ವಿವರಗಳನ್ನು ಈ ಸದನದ ಎಲ್ಲಾ ಸದಸ್ಯರಿಗೆ ಒದಗಿಸಿ, ಚರ್ಚೆ ಮಾಡೋಣ. ಮೊದಲು ಟೆಂಡರ್ ಕರೆದಾಗ ಯಾರೂ ಮುಂದೆ ಬರಲಿಲ್ಲ; ಯಾರೋ ಬಂದವರು 20 ಪರ್ಸೆಂಟ್ ನೀವೇ ಹಣ ಹಾಕಿ ಅಂದರು. ಸರ್ಕಾರ ಜಮೀನು ನೀವೇ ಕೊಂಡು ಕೊಡಿ ಎಂದು ಹೇಳಿತು. ಅದಕ್ಕೆ ಯಾರೂ ಮುಂದೆ ಬರಲಿಲ್ಲವೆಂದು ನಾವು ಈ ವ್ಯವಹಾರ ಮಾಡಿಕೊಂಡಿದ್ದೇವೆ, ಅದಕ್ಕೆ ಕಲ್ಯಾಣಿ ಗ್ರೂಪ್‌ನವರಿಗೆ ಕೊಡುವುದಕ್ಕೆ ಹೊರಟಿದ್ದೇವೆಂದು ಹೇಳುತ್ತಿದ್ದೀರಿ. ಮೊದಲು ಟೆಂಡರ್ ಕರೆದ ವಿವರ ಹಾಗೂ ನಾನು ಕೇಳಿದ ಎಲ್ಲಾ ವಿವರಗಳನ್ನು ತಾವು ನನಗೆ ಕೊಡಬೇಕೆಂದು ಈ ಸಂದರ್ಭಧಲ್ಲಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ದುಃಖ ತರುವ ಸಂಗತಿ ಎಂದರೆ ಯಾರುಹಣ ಪಡೆಯುವುದಕ್ಕೆ ಹೊರಟಿದ್ದಾರೆ ಅದಕ್ಕೆ ನೀವು ಗ್ಯಾರಂಟಿ ಕೊಡುವುದಕ್ಕೆ ಹೊರಟಿದ್ದೀರಿ. ಜಗತ್ತಿನ ಇತಿಹಾಸದಲ್ಲಿ ಒಂದು ಖಾಸಗಿ ಕಂಪನಿಗೆ ಸರ್ಕಾರ ಗ್ಯಾರಂಟಿ ನಿಲ್ಲುವುದು ನಾನು ಎಂದೂ ಕೇಳಿಲ್ಲ. ಇದೆಲ್ಲಾ ಗುಟ್ಟಿನಲ್ಲೇ ಇದೆ. ನಾನು ಪ್ರಾರಂಭದಲ್ಲೇ ಆರೋಪ ಮಾಡಿದ್ದೆ, ಜನರು ಏನು ಮಾತನಾಡುತ್ತಿದ್ದಾರೆಂದರೆ ಇವತ್ತು ಸರ್ಕಾರದಲ್ಲಿರುವ ಕೆಲವು ಸಚಿವರು ಮತ್ತು ಉನ್ನತಾಧಿಕಾರಿಗಳು ಈ ಹಿನ್ನೆಲೆಯಲ್ಲಿ ನಿಂತುಕೊಂಡು ಅವರು ದುಡಿದ ಹಣವನ್ನು ಇದಕ್ಕೆ ಹಾಕಿ ವ್ಯವಹಾರ ಕುದುರಿಸುವ ಕೆಲಸ ನಡೆದಿದೆ. ಜನರಿಗೆ ಕಾಣುವುದಿಲ್ಲವೆಂದು ಶಾಶ್ವತವಾಗಿ ಕೋಟ್ಯಾಧಿಪತಿಯಾಗುವ ಸಂಚು

ಇದರಲ್ಲಿ ನಡೆದಿದೆ. ಅದಕ್ಕೆ ನನ್ನ ಒತ್ತಾಯ ಏನೆಂದರೆ, ಯಾವುದೇ ಕಾರಣಕ್ಕೂ ಸ್ಯಾಟಲೈಟ್ ಟೌನ್ ಮತ್ತು ಸೂಪರ್ ಹೈವೇ ಇವೆರಡನ್ನು ಒಂದಕ್ಕೊಂದು ಲಿಂಕ್ ಮಾಡಬೇಡಿ.

1.40 ಪಿ.ಎಂ

ಸೂಪರ್ ಹೈ-ವೇಗೆ ಟೆಂಡರ್ ಕರೆಯಿರಿ. ಏನು ಕಂಡೀಷನ್ ಇಡುತ್ತಾರೆ, ಅದನ್ನು ಕೇಳಿ. ನಾನು ಆಮೇಲೆ ಮಾತನಾಡುತ್ತೇನೆ. ನಾನು ಈಲ್ಡ್ ಆಗಿಲ್ಲ.

+ ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಛೇರ್ಮನ್‌ರವರೇ, ಇವರು ಹೇಳುತ್ತಾರೆ, ಕೆಲವು ಸರ್ಕಾರಿ ಹಿರಿಯ ಅಧಿಕಾರಿಗಳು, ಸಚಿವರು.... ದಯಮಾಡಿ ಹೇಳಿ. ಸುಮ್ಮನೆ ಹಾಗೆ ಹೇಳಬಾರದು. ಇಂಥ ಅಧಿಕಾರಿ, ಇಂಥ ಸಚಿವರು ಇದ್ದಾರೆಂದು ಹೇಳಲಿ, ನನಗೆ ಸಂತೋಷ.

ಶ್ರೀ ಬಿ.ಎಸ್.ಯಡಿಯೂರಪ್ಪ: ಹೇಳುತ್ತೇನೆ. ಟೈಂ ಕೊಡಿ.

ಶ್ರೀ ಎಂ.ಶ್ರೀನಿವಾಸ್: ಕೋರಮಂಗಲ ಸ್ಟೇಡಿಯಂ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಏನು ಹೇಳಿದರು ಗೊತ್ತಾ? ಒಂದು ದಿನ ಅವನು ಲೇಟಾಗಿ ಕಟ್ಟಿದರೆ 50 ಸಾವಿರ ರೂಪಾಯಿ ದಂಡ ಹಾಕುತ್ತೇವೆಂದು ಹೇಳಿದರು. ನ್ಯಾಷನಲ್ ಗೇಮ್ಸ್‌ಗೋಸ್ಕರ ಕೋರಮಂಗಲದಲ್ಲಿ ಸ್ಟೇಡಿಯಂ ಕಟ್ಟುವ ಬಗ್ಗೆ ಇದೇ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದಾಗ, 25 ಕೋಟಿ ರೂಪಾಯಿ ಅಡ್ವಾನ್ಸ್ ಏಕೆ ಕೊಟ್ಟಿರಿ ಎಂದು ಕೇಳಿದ್ದಕ್ಕೆ ಅವರು ಇನ್‌ಟೈಂಗೆ ಕಟ್ಟಲಿಲ್ಲವೆಂದರೆ, ಅವನು ಲೇಟಾಗಿ ಕಟ್ಟಿದರೆ ದಿನಕ್ಕೆ 50 ಸಾವಿರ ರೂಪಾಯಿ ದಂಡ ಹಾಕುತ್ತೇವೆಂದು ಹೇಳಿದರು. ಸುಮಾರು 45 ಲಕ್ಷ ರೂಪಾಯಿ ಅವರು ಕೊಡಬೇಕು. ಆದರೆ ಅದು ಸರ್ಕಾರಕ್ಕೆ ಬರಲಿಲ್ಲ. ಸದನದಲ್ಲಿ ಹೇಳಿದ್ದೀರಿ, ರೆಕಾರ್ಡ್ ಆಗಿದೆ. ಏನಾಯಿತು? ಫೈನ್ ತೆಗೆದುಕೊಂಡಿರೋ?

ಶ್ರೀ ಆರ್.ವಿ.ದೇಶಪಾಂಡೆ: ಶ್ರೀ ಯಡಿಯೂರಪ್ಪನವರು ಈ ವಿಷಯವನ್ನು ರೈಸ್ ಮಾಡಲಿ, ಚರ್ಚೆಯಾಗಲೀ, ಅದರ ಮೇಲೆ ಅವರು ಬೆಳಕು ಚೆಲ್ಲಲಿ. ಆದರೆ, ಅವರು ಸರ್ಕಾರದ ಸಚಿವರು, ಹಿರಿಯ ಅಧಿಕಾರಿಗಳು ಇದ್ದಾರೆಂದು ವೇಗ್ ಆಗಿ ಹೇಳಬಾರದು. ತಮ್ಮ ಹತ್ತಿರ ಈ ತರಹದ ಏನಾದರೂ ದಾಖಲೆಗಳಿದ್ದರೆ ದಯವಿಟ್ಟು ಸ್ಪಷ್ಟವಾಗಿ ಹೇಳಿ. ಮುಖ್ಯಮಂತ್ರಿಗಳು, ಸಚಿವರು, ಅಧಿಕಾರಿಗಳು ಇಂಥವರಿದ್ದಾರೆಂದು ಹೇಳಿ. ಅದರಿಂದ ಏನಾಗುತ್ತದೆ, ನಮಗೂ, ನಿಮಗೂ ಒಳ್ಳೆಯದು.

ಡಾ: ಎಂ.ಪಿ.ಕರ್ಕಿ: ಯಾವುದೇ ಆಪಾದನೆ ಮಾಡಬೇಕಾದರೆ, ನೋಟೀಸ್ ಕೊಟ್ಟು ಮಾಡಬೇಕು. ಹಾಗೇ ಬರುವುದಿಲ್ಲ. ನಮ್ಮ ಕಾನೂನಿನ ಪ್ರಕಾರ ನಾವು ಹಾಗೆ

ಹೇಳುತ್ತೇವೆ. ನಮಗೆ ಗೊತ್ತಿರುವ ಇನ್‌ಫರ್ಮೇಷನ್ ಹೇಳುತ್ತೇವೆ.

ಶ್ರೀ ಆರ್.ವಿ.ದೇಶಪಾಂಡೆ: ಹಾಗೆ ಹೇಳಬಾರದು. ಮಾನ್ಯ ಡಾ: ಎಂ.ಪಿ.ಕರ್ಕಿಯವರು, ಹಿರಿಯ ಸದಸ್ಯರು ಒಳ್ಳೆಯ ರೀತಿಯಲ್ಲಿ ಹೇಳಿದ್ದಾರೆ. ಯಾವುದೇ ಆಪಾದನೆಯನ್ನು ಮಾಡಬೇಕಾದರೆ ನೋಟೀಸ್ ಕೊಟ್ಟು ಮಾಡಬೇಕು. ಆದರೆ, ಶ್ರೀ ಯಡಿಯೂರಪ್ಪರವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಅವರ ಹತ್ತಿರ ದಾಖಲೆ, ಪುರಾವೆ ಇದ್ದರೆ, ಅವರಿಗೆ ಅಧಿಕಾರವಿದೆ. ಹಾಗಾಗಿ, ವೇಗ್ ಆಗಿ ಹೇಳಬಾರದು. ಸ್ಪಷ್ಟವಾಗಿ, ಇಂಥ ಸಚಿವರು, ಅಧಿಕಾರಿಗಳಿದ್ದಾರೆಂದು ಹೇಳಿದರೆ ಒಳ್ಳೆಯದಾಗುತ್ತದೆ.

ಶ್ರೀ ಎಚ್.ಎನ್.ನಂಜೇಗೌಡ: ಇದು ಹೇಗಾಗುತ್ತದೆಂದರೆ, ಶ್ರೀ ಆರ್.ವಿ.ದೇಶಪಾಂಡೆಯವರು ಈ ಕಡೆ ಕೆಲಸ ಮಾಡಿದ್ದಾರೆ. ಅವರಿಗೂ ಗೊತ್ತು. ಇವೆಲ್ಲಾ ಸರ್ಕಮ್‌ಸ್ಟೆನ್ಸಿಯಲ್ ಎವಿಡೆನ್ಸ್. 22 ಸಾವಿರ ಎಕರೆ ಅಲ್ಲವೇ? ಟೌನ್‌ಷಿಪ್‌ಗೆ ಈಗ ಕೊಟ್ಟರೆ, ಇದರಲ್ಲಿ ಟೌನ್‌ಷಿಫ್ ಡೆವಲಪ್ ಆದರೆ, 10 ಸಾವಿರ ಕೋಟಿ ರೂಪಾಯಿ ಲಾಭ ಮಾಡುತ್ತಾರೆ. 10 ಸಾವಿರ ಕೋಟಿ ರೂಪಾಯಿ ಲಾಭ ಮಾಡುತ್ತಾರೆನ್ನುವುದು, ಅದು ಸರ್ಕಾರದವರಿಗೂ ಗೊತ್ತಾಗಬೇಕು. ಅವನು ಅಷ್ಟು ಲಾಭ ಮಾಡುತ್ತಾನೆನ್ನುವುದು ಸರ್ಕಾರದವರಿಗೆ ಗೊತ್ತಾಗುತ್ತದೆ. ಇಷ್ಟು ಲಾಭ ಮಾಡುತ್ತಾರೆಂದು ತಿಳಿದುಕೊಂಡೂ, ಬಿಟ್ಟಿಯಾಗಿ ಕೊಡುತ್ತಾರೆಯೇ ಎಂಬುದು ನಮ್ಮ ಪ್ರಶ್ನೆ ಇರುತ್ತದೆ. ನಾನೇಕೆ ಹೇಳುತ್ತೇನೆಂದರೆ, ಸ್ವಲ್ಪ ದಿನಗಳ ಹಿಂದೆ, ಒಬ್ಬ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಸ್ಯಾಟಲೈಟ್ ಟೌನ್ ಮಾಡುವುದಾದರೆ, ಹೌಸಿಂಗ್ ಪ್ರಾಜೆಕ್ಟ್‌ಗೆ ನಾವು ಇಂಟರೆಸ್ಟ್ ಹಾಕಿಕೊಂಡು ದುಡ್ಡು ಹಾಕುತ್ತೇವೆ ಡೆವಲಪ್ ಮಾಡುತ್ತೇವೆ, ಆನಂತರ ನಿಮಗೇ ಬಿಟ್ಟುಬಿಡುತ್ತೇವೆ, ನಮಗೆ ಇಂಟರೆಸ್ಟ್ ಸಮೇತ ದುಡ್ಡು ಕೊಡಬೇಕು, ಒಂದು ಇನ್ವಿಟೇಷನ್ ಕಳುಹಿಸಿ, ಚರ್ಚೆಗೆ ಬರುತ್ತೇವೆಂದು ಹೇಳಿದರು. ಡೆಲ್ಲಿಯಲ್ಲಿ ನಾನೂ ಇದ್ದೆ. ಸ್ಯಾಟಲೈಟ್ ಟೌನ್‌ಗೆ ದುಡ್ಡು ಹಾಕುವವರಿದ್ದಾರೆ, ಏಕೆಂದರೆ, ಅದು ಗ್ಯಾರಂಟಿ ವಾಪಸ್ ಬರುತ್ತದೆಂಬುದರಿಂದ. ಟೌನ್‌ಷಿಫ್‌ನಲ್ಲಿರತಕ್ಕ ಲಾಭ ಯಾವುದರಲ್ಲೂ ಇಲ್ಲ. ಇದರಲ್ಲಿ 22 ಸಾವಿರ ಎಕರೆ ಟೌನ್‌ಷಿಫ್‌ಗೆ ಕೊಟ್ಟರೆ, ಮಿನಿಮಂ 10 ಸಾವಿರ ಕೋಟಿ ಲಾಭ ಮಾಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲ್ಲಿ ಪ್ರಶ್ನೆ ಇಷ್ಟೆ, ಸರ್ಕಾರ ಉತ್ತರವನ್ನೇನು ಕೊಡುತ್ತದೆಂಬುದು ನಮಗೆ ಗೊತ್ತಿದೆ. ನಮ್ಮದೇನೂ ಅಭ್ಯಂತರವಿಲ್ಲ. ನೀವು ಉತ್ತರವನ್ನು ಕೊಡಬೇಕು. ನಾನು ಇಲ್ಲಿ ಇಷ್ಟೇ ಹೇಳುತ್ತಿರುವುದು, ತಮ್ಮಲ್ಲಿ ಪ್ರಾಮಾಣಿಕವಾಗಿ ಈ ಮೈಸೂರು-ಬೆಂಗಳೂರು ಸೂಪರ್ ಹೈವೇ ಬಗ್ಗೆಯೇ ನಿಮಗೆ ಕಾಳಜಿ ಇದ್ದರೆ, ವಾಹನ ಸಂಚಾರ ಜಾಸ್ತಿಯಾಗಿದೆ, ಆಕ್ಸಿಡೆಂಟ್ ಜಾಸ್ತಿಯಾಗುತ್ತಿದೆ, ನಾವು ಬೆಳೆಯುತ್ತಿದ್ದೇವೆ, ಈ ತರಹ ಒಳ್ಳೆಯ ಸೂಪರ್ ಹೈ-ವೇ ಮಾಡುವುದಕ್ಕೆ ನೀವು

ಹೊರಟ್ಟಿದ್ದೀರಿ, ನನಗೆ ತುಂಬಾ ಸಂತೋಷ, ಸ್ವಾಗತಾರ್ಹ ಸಂಗತಿ. ನನಗೇನೆಂದರೆ, ಮುಂದುವರಿದಿರುವಂತಹ ನಮ್ಮ ದೇಶದ ಯಾವುದೇ ರಾಜ್ಯಗಳಲ್ಲಿ ಈ ರೀತಿ ಸೂಪರ್ ಹೈ-ವೇ ಮಾಡುವುದಕ್ಕೆ ಖಾಸಗಿಯವರಿಗೆ ಕೊಟ್ಟಿಲ್ಲ. ಅವನಿಗೆ ಈ ತರಹ 30 ವರ್ಷದವರೆಗೆ ವಸೂಲು ಮಾಡುವಂಥಾದ್ದು ಜಮೀನನ್ನು ಕೊಟ್ಟಿಲ್ಲ. ನಾನು ಮಾತನಾಡುವ ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಹೇಗೆ ಮಾಡಿದ್ದಾರೆ ಆ ಬಗ್ಗೆ ಸ್ಟಡಿ ಮಾಡಿ ಎಂದು ನಾನೇ ನಿಮಗೆ ಉದಾಹರಣೆ ಕೊಟ್ಟಿದ್ದೆ. ಇವತ್ತು ಸೆಟಲೈಟ್ ಸಿಟಿ ಎಂದು ಹೇಳಿ ಕಲಕತ್ತಾದಲ್ಲಿ ಮತ್ತು ಮುಂಬೈದಲ್ಲಿ ನಯಿ ಮುಂಬೈ ಎಂದು ಮಾಡಿದ್ದಾರೆ. ನೀವು ಅದನ್ನು ಸ್ಟಡಿ ಮಾಡಿ. ನಾನು ಬೇಡವೆಂದು ಹೇಳಲಿಲ್ಲ. ಅಲ್ಲೆಲ್ಲೂ ಸೆಟಲೈಟ್ ಟೌನ್‌ಗೆಂದು ಜಾಗ ಕೊಟ್ಟಿಲ್ಲ. ಈ ಒಂದು ಹೈ-ವೇಗೆ ಹೌಸಿಂಗ್‌ನಲ್ಲಿ ಇನ್‌ಕ್ಲೂಡ್ ಮಾಡಿಲ್ಲ. ನೀವು ಹೈ-ವೇ ಹೆಸರಿನಲ್ಲಿ ಹೌಸಿಂಗ್ ಸ್ಕೀಂ ಮಾಡಿಕೊಂಡು, ಲ್ಯಾಂಡ್ ಅಕ್ವೈರ್ ಮಾಡಿಕೊಂಡು, ಸುಮಾರು 22 ಸಾವಿರ ಎಕರೆ ಕೊಡುವುದಕ್ಕೆ ಹೊರಟಿರುವುದು, ನಿಶ್ಚಿತವಾಗಿ ಆ ಭಾಗದ ರೈತನ ಗತಿಯೇನು? ಎರಡೂ ಕಡೆ ಉದ್ದಕ್ಕೂ ಫೆನ್ಸಿಂಗ್ ಮಾಡುತ್ತೀರಿ? ಸುತ್ತಮುತ್ತಲಿನ ಗ್ರಾಮದ ಯಾರೂ ಸಹ ರಸ್ತೆಯಲ್ಲಿ ಪ್ರವೇಶ ಮಾಡುವ ಹಾಗಿಲ್ಲ. ಜಾನುವಾರು ಅಲ್ಲಿ ಪಾಸ್ ಆಗುವುದಿಲ್ಲ. ಯಾರಿಗಾಗಿ ಇದು? ಕೋಟ್ಯಾಧಿಪತಿಗಳು, ಶ್ರೀಮಂತರ ಕಾರುಗಳು ಓಡಾಡುತ್ತವೆ. ಆ ತುದಿಯಿಂದ, ಈ ತುದಿವರೆಗೆ. ಎಲ್ಲೋ ಒಂದು ಸ್ಪಾಟ್‌ನಲ್ಲಿ ಒಂದು ನಿಮಿಷ ನಿಲ್ಲಬಹುದು. ಆ ಭಾಗದ ರೈತನಿಗೆ ಏನೂ ಅನುಕೂಲವಿಲ್ಲ, ಜನತೆಗೆ ಇದರಲ್ಲೇನೂ ಅನುಕೂಲ ಆಗಿಲ್ಲ. ಈ ಟ್ರಾಫಿಕ್ ಕಂಟ್ರೋಲ್ ಮಾಡಬೇಕು, ಆಕ್ಸಿಡೆಂಟ್ ಕಡಿಮೆ ಮಾಡಬೇಕು ಅಂದರೆ, ಮೈಸೂರು-ಬೆಂಗಳೂರು ಮಧ್ಯೆ ಎಲೆಕ್ಟ್ರಿಕ್ ಟ್ರೇನ್ ಬಿಡಿ. ಕೇಂದ್ರಸರ್ಕಾರಕ್ಕೆ ಒತ್ತಾಯ ಮಾಡಿ, ವ್ಯವಸ್ಥೆ ಮಾಡಿ. ಎಲ್ಲಾ ಬಿಟ್ಟು, ಈ ರೀತಿ ಯಾರೆನ್ನೋ ಉದ್ಧಾರ ಮಾಡುತ್ತೇವೆಂದು ಹೇಳಿ, 22 ಸಾವಿರ ಎಕರೆ ಅದರಲ್ಲಿ 7 ಸಾವಿರ ಎಕರೆ ಸರ್ಕಾರದ ಜಮೀನು, ಮಾಡುವುದಕ್ಕೆ ಹೊರಟಿರುವುದು ದೊಡ್ಡ ಹಗರಣ. ಇದುವರೆಗೆ ನಮ್ಮ ದೇಶದಲ್ಲಿ ಆಗಿರುವಂತಹ ಹಗರಣಗಳಿಗಿಂತ, ಎಲ್ಲಾ ಹಗರಣಗಳನ್ನೂ ಮೀರಿಸುವಂತಹ ದೊಡ್ಡ ಹಗರಣ ಇದಾಗುತ್ತದೆ. ಇದೊಂದು ಲ್ಯಾಂಡ್ ಗ್ರಾಬಿಂಗ್ ಮಾಡುವಂತಹ ಸಂಚು ಇದರಲ್ಲಿದೆ. ಅದಕ್ಕೋಸ್ಕರ, ಯಾವ ಕಾರಣಕ್ಕೂ ಸಹ ನೀವು ಗ್ಲೋಬಲ್ ಟೆಂಡರ್ ಕರೆಯದೆ ಈ ಸ್ಯಾಟಲೈಟ್ ಮತ್ತು ಸೂಪರ್ ಹೈ-ವೇ ಮಾಡುತ್ತೇವೆನ್ನುವುದಕ್ಕೆ ನಾವಂತೂ ಯಾವುದೇ ಕಾರಣಕ್ಕೂ ಒಪ್ಪುವುದಕ್ಕೆ ಸಿದ್ಧವಿಲ್ಲ. ಯಾವ ರೀತಿಯ ಹೋರಾಟ ಮಾಡುವುದಕ್ಕೂ ಸಿದ್ಧವಿದ್ದೇವೆ. ನಾನು ನಿಮಗೆ ಒತ್ತಾಯ ಮಾಡಿದಂತೆ, ನಮಗೆ ದಯಮಾಡಿ ಈ ವಿವರವನ್ನು ಕೊಡಿ. ನಾವು, ಇಲ್ಲಿರುವಂತಹ ಶಾಸಕರು ಸ್ಟಡಿ ಮಾಡುತ್ತೇವೆ. ಏಕೆಂದರೆ, ಈ ರೀತಿ ನೀವು ಯಾವುದಾದರೊಂದು ಯೋಜನೆಯನ್ನು ಮಾಡುವಂತಹ ಕಾಲದಲ್ಲಿ, ಅದರ ವಿವರವನ್ನು ಒದಗಿಸಬೇಕಲ್ಲವೇ? ಅದನ್ನೆಲ್ಲಾ ಏಕೆ ಮುಚ್ಚಿಟ್ಟಿದ್ದೀರಾ? ನ್ಯಾಯವಾಗಿ ನಾನು ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆಯೇ ಬಹುಶಃ ಈ ಮನೆಯಲ್ಲಿರುವ ಸದಸ್ಯರಿಗೆ ಇದರ

ಸಂಪೂರ್ಣವಾದ ವಿವರಗಳು ಗೊತ್ತಿರಬೇಕಾಗಿತ್ತಲ್ಲಾ? ಯಾವುದೇ ವಿವರವನ್ನು ಇದುವರೆಗೆ ತಾವು ಒದಗಿಸಲಿಲ್ಲ. ಅದಕ್ಕಾಗಿ, ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ನಾನು ಕೇಳಿದ ಎಲ್ಲಾ ವಿವರಗಳನ್ನೂ ತಾವು ಒದಗಿಸಿಕೊಟ್ಟರೆ, ಆ ದಾಖಲೆಯ ಆಧಾರದ ಮೇಲೆ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೋಸ್ಕರ, ಎಲ್ಲಾ ವಿವರವನ್ನೂ ಒದಗಿಸಿಕೊಡಬೇಕು. ಯಾವ ಕಾರಣಕ್ಕೂ ಸಹ ಈ ಸೆಟಲೈಟ್ ಟೌನ್‌ನ್ನು ಮತ್ತು ಸೂಪರ್ ಹೈ-ವೇ ಜೊತೆಗೆ ಸೇರಿಸಿ ಯಾರೋ ಒಬ್ಬರಿಗೆ ಒಂದು ಏಜೆನ್ಸಿ ಫಿಕ್ಸ್ ಮಾಡುವಂತಹ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದೀರಿ, ಅದನ್ನು ತಕ್ಷಣ ಕೈ ಬಿಡಬೇಕು. ಇಲ್ಲದೇ ಹೋದರೆ, ದೊಡ್ಡ ಹೋರಾಟಕ್ಕೆ ನೀವೇ ಅವಕಾಶವನ್ನು ಮಾಡಿಕೊಟ್ಟ ಹಾಗಾಗುತ್ತದೆನ್ನುವ ಮಾತನ್ನು ಹೇಳುತ್ತಾ, ದಯಮಾಡಿ ನಾನು ಕೇಳಿದ ಎಲ್ಲಾ ವಿವರಗಳನ್ನು, ಎಲ್ಲಾ ಶಾಸಕರಿಗೆ ಒದಗಿಸಿ, ಚರ್ಚೆ ಮಾಡೋಣ, ನಂತರ ಆ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

(ಅಧ್ಯಕ್ಷರಾದ (ಶ್ರೀ ರಮೇಶ್‌ಕುಮಾರ್‌ರವರು) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ಯಡಿಯೂರಪ್ಪನವರು ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈ-ವೇ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಒಂದೆರಡು ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ಮೊದಲನೆಯದಾಗಿ, ಎಕ್ಸ್‌ಪ್ರೆಸ್ ಹೈ-ವೇ ಮಾಡಬೇಕಾದರೆ, ಇದಕ್ಕೆ 20 ಸಾವಿರ ಎಕರೆ ಬೇಕಾಗಿದೆಯೇ ಎಂಬುದು. ಎರಡನೆಯದಾಗಿ, ಈ ಎಕ್ಸ್‌ಪ್ರೆಸ್ ಹೈ-ವೇಗೆ ಮತ್ತು 7 ಸ್ಯಾಟಲೈಟ್ ಟೌನ್ ಮಾಡಬೇಕೆಂದು ಏನು ಹೊರಟಿದ್ದಾರೆ, ಅದಕ್ಕೆ ಲಿಂಕೇಜ್ ಏಕೆ? ಕಾರಣವೇನು? ಏಕೆಂದರೆ, ಸ್ಯಾಟಲೈಟ್ ಟೌನ್ ಬೇರೆ, ಎಕ್ಸ್ ಪ್ರೆಸ್ ಹೈ-ವೇ ಬೇರೆ. ಎಕ್ಸ್‌ಪ್ರೆಸ್ ಹೈ-ವೇಯನ್ನು ಮಾಡತಕ್ಕಂಥದ್ದೇಕೆಂದರೆ, ಈಗಾಗಲೇ ಅವರು ಹೇಳಿದಂತೆ ಆಕ್ಸಿಡೆಂಟ್ ಕಡಿಮೆಯಾಗಬೇಕು ಮತ್ತು ಮೈಸೂರು-ಬೆಂಗಳೂರು ಮಧ್ಯದಲ್ಲಿ ಹೆಚ್ಚು ಕರ್ವ್‌ಗಳಿವೆ, ಇದನ್ನು ಸ್ಟ್ರೈಟ್ ಮಾಡಬೇಕೆಂದು ಹೇಳಿ ಒಂದುರಸ್ತೆ ಮಾಡಿದರೆ ಸಾಕಷ್ಟು ಟೂರಿಸ್ಟ್‌ಗಳಿಗೆ ಅನುಕೂಲವಾಗುತ್ತದೆ ಮತ್ತು ಹೋಗಿ ಬರತಕ್ಕ ಜನಕ್ಕೆ ಅನುಕೂಲವಾಗುತ್ತದೆ, ಆ ದೃಷ್ಟಿಯಿಂದ ಈ ಎಕ್ಸ್‌ಪ್ರೆಸ್ ಹೈ-ವೇ ಮಾಡಬೇಕೆಂದು ಹೇಳಿ ಈ ಒಂದು ಪ್ರಸ್ತಾವನೆ ಇದೆ. ಆದರೆ, ಎಕ್ಸ್‌ಪ್ರೆಸ್ ಹೈ-ವೇ ಬಿಟ್ಟು ಇವತ್ತು ರಿಯಲ್ ಎಸ್ಟೇಟ್ ಏಜೆನ್ಸಿ ಬಿಸಿನೆಸ್ ಮಾಡುವುದಕ್ಕೆ ನಾವು 20 ಸಾವಿರ ಎಕರೆಯನ್ನು ಅಕ್ವೈರ್ ಮಾಡುತ್ತಿದ್ದೇವೆ. ಎಂದು ಹೇಳಿ ಇದೊಂದು ಕಡೆ. ಮೂರನೆಯದಾಗಿ, 7,700 ಎಕರೆ ಈಗಾಗಲೇ ಸರ್ಕಾರಿ ಜಮೀನಿದೆ. ಉಳಿದಂತಹ ಜಮೀನನ್ನು ಅಕ್ವೈರ್ ಮಾಡಿ, ಅವರಿಂದ ಖರೀದಿ ಮಾಡಿ ತೆಗೆದುಕೊಳ್ಳುವಂಥದ್ದನ್ನು ತಾವು ಮಾಡುತ್ತಿದ್ದೀರಿ. ಆದರೆ, ನೀವು ಮೊದಲೇ ಎಲ್ಲೆಲ್ಲಿ ಸರ್ಕಾರಿ ಜಮೀನಿದೆ ಅಲ್ಲಿ ಮಾತ್ರ ಕನ್‌ಸ್ಟ್ರಕ್ಷನ್ ಮಾಡತಕ್ಕದ್ದನ್ನು ಪ್ರಾರಂಭಿಸಿ. ಆಮೇಲೆ,

ಬೇಕಾದರೆ ಪ್ರೈವೇಟ್ ಜಮೀನು ಎಷ್ಟು ಬೇಕೆನ್ನತಕ್ಕ ಒಂದು ಚಿತ್ರ ಸ್ಪಷ್ಟವಾಗಿ ಕೊಟ್ಟಮೇಲೆ, ಅದನ್ನು ತೆಗೆದುಕೊಳ್ಳತಕ್ಕದ್ದು ಆಗಬೇಕು. ತಾವು ಎಂ.ಓ.ಯುಗೆ. ಸಹಿ ಮಾಡಿದ್ದೀರೆಂದು ಗೊತ್ತಾಗಿದೆ. ಆ ಎಂ.ಓ.ಯು.ನಲ್ಲಿ ಏನಿದೆ? ತಾವು ಯಾವ ಯಾವ ಕಂಡೀಷನ್ಸ್‌ಗೆ ಒಪ್ಪಿಕೊಂಡಿದ್ದೀರಿ? ಅದರ ಮೇಲೆ ಎಷ್ಟು ಬಡ್ಡಿ ಬರುವ ಸಾಧ್ಯತೆಯಿದೆ? ಆ ಎಕ್ಸ್‌ಪ್ರೆಸ್ ಹೈ-ವೇಗೆ ಎಷ್ಟು ಹಣವನ್ನು ತಾವು ಖರ್ಚು ಮಾಡುತ್ತಿದ್ದೀರಿ. ಅದಕ್ಕೆ ಇನ್‌ಟರ್ನ್ ತಾವು ಟೋಲ್ ಕಲೆಕ್ಟ್ ಮುಖಾಂತರ ಆ ಹಣವನ್ನು ಸಂಪಾದನೆ ಮಾಡಬೇಕೆಂದು ಮಾಡಿದ್ದೀರಿ. ಅದಕ್ಕೆ ಎಷ್ಟು ಪರ್ಸೆಂಟೇಜ್ ವರ್ಕ್‌ಔಟ್ ಆಗುತ್ತಿದೆ ಎನ್ನತಕ್ಕದ್ದು ಒಂದು. ಇದೇ ಸಂದರ್ಭಧಲ್ಲಿ, ಅಲ್ಲಿರತಕ್ಕ ಹಳೆಯ ಮೈಸೂರು-ಬೆಂಗಳೂರು ರಸ್ತೆಯ ಪರಿಸ್ಥಿತಿ ಏನು? ಅದರಮೇಲೆ ನಾವು ನಡಿಯಬೇಕೇ, ಬೇಡವೇ? ಅದರ ಮೇಲೆ ನಮ್ಮ ಬಂಡಿಗಳು, ಕಾರು, ಜೀಪ್‌ಗಳು, ವ್ಯಾನ್‌ಗಳು ಬರುತ್ತವೆಯೇ, ಹೇಗೆ? ಅದಕ್ಕೂ ಟ್ಯಾಕ್ಸ್ ಕೊಡಬೇಕೇ? ಅದೆಲ್ಲವನ್ನೂ ಕೂಡ ಈ ಸದನಕ್ಕೆ ಗೊತ್ತಾಗಬೇಕಲ್ಲವೇ? ಇಂತಹ ದೊಡ್ಡ ವ್ಯವಹಾರ ಇದ್ದಮೇಲೆ ಸುಮಾರು 5-6 ಸಾವಿರ ಕೋಟಿ ರೂಪಾಯಿಗಳ ವ್ಯವಹಾರವನ್ನು ತಾವು ಮಾಡುವಾಗ, ಇವತ್ತಿನ ದಿವಸ ಈ ಸದನಕ್ಕೆ ಸಂಪೂರ್ಣವಾದ ಮಾಹಿತಿ ಇರಬೇಕು. ಇಲ್ಲದಿದ್ದರೆ, ಇದೊಂದು ನ್ಯಾಷನಲ್ ಗೇಮ್‌ನಲ್ಲಿ 160-170 ಪರ್ಸೆಂಟ್ ಹೆಚ್ಚಿಗೆ ಕೊಟ್ಟು, ಇವತ್ತು ತಾವು ಏನು 22-30 ಪರ್ಸೆಂಟ್ ಬಡ್ಡಿ ಕೊಡುತ್ತಿದ್ದೀರಲ್ಲಾ, ಆ ಪರಿಸ್ಥಿತಿ ಆಗಬಾರದು. ಅದಕ್ಕೆ ನನ್ನ ಸಲಹೆ ಏನೆಂದರೆ ಅಧ್ಯಕ್ಷರೆ, ಇದಕ್ಕೆ ಒಂದು ಜಾಯಿಂಟ್ ಹೌಸ್ ಕಮಿಟಿ ಮಾಡಿ. ಆ ಜಾಯಿಂಟ್ ಹೌಸ್ ಕಮಿಟಿಯವರು ನೀವು ಮಾಡಿದಂಥ ಎಂ.ಒ.ಯು. ಪ್ರಕಾರ ಎಕ್ಸ್‌ಪ್ರೆಸ್ ಹೈ-ವೇಗೆ ಎಷ್ಟು ಅಕ್ಚುಯಲ್ಲಾಗಿ ಜಮೀನು ಬೇಕು, ಉಳಿದ ಜಮೀನಿನ ಅವಶ್ಯಕತೆ ಇದೆಯೇ ಇಲ್ಲವೇ ಎಂಬ ಬಗ್ಗೆ ನಿರ್ಣಯ ಮಾಡಲಿ. ಅದರಲ್ಲಿ ಈ ಸದನದ ಸದಸ್ಯರೂ ಇರುತ್ತಾರೆ, ಆ ಸದನದ ಸದಸ್ಯರೂ ಇರುತ್ತಾರೆ. ಈ ಒಂದು ಎಂ.ಒ.ಯು.ವನ್ನೂ ಕೂಡ ಅವರು ಎಗ್ಸಾಮಿನ್ ಮಾಡಿದಂತಾಗುತ್ತದೆ. ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ಏನೆಂದರೆ ಕಲ್ಯಾಣಿ ಗ್ರೂಪ್ ಅಥವಾ ಯಾವುದೇ ಗ್ರೂಪ್ ಇದೆ ಆ ಗ್ರೂಪ್‌ನವರು ಇವತ್ತಿನ ದಿವಸ ಏನು ಲೋನ್ ಪಡೆದುಕೊಳ್ಳಬೇಕು ಎಂದು ಹೇಳುತ್ತಾರೆ ಅದಕ್ಕೆ ಸರ್ಕಾರ ಗ್ಯಾರಂಟಿ ಕೊಡಬೇಕೆಂದು ಹೇಳುತ್ತಿದ್ದಾರೆ. ಯಾವುದೇ ಕಂಪನಿಯವರು ತಮ್ಮ ಕಂಪನಿ ಅಥವಾ ಫರ್ಮ್ ವತಿಯಿಂದ ಇಂಡಸ್ಟ್ರೀಸ್ ಹಾಕಬೇಕಾದರೆ ಅದಕ್ಕೆ ನೀವೇ ಇವತ್ತು ಗ್ಯಾರಂಟಿ ಕೊಡಬೇಕೆಂದು ಬಂದಾಗ ನ್ಯಾಚುರಲ್ಲಾಗಿ ಅವನ ಜವಾಬ್ದಾರಿ ಆಗಲೀ ಅಥವಾ ಅವನ ಇನ್‌ವೆಸ್ಟ್‌ಮೆಂಟ್ ಇದರಲ್ಲಿ ಹೆಚ್ಚಿನ ರೀತಿಯಲ್ಲಿ ಏನೂ ಇರುವುದಿಲ್ಲ. ಆಗ ಏನಾಗುತ್ತದೆ? ನಿಮ್ಮದೇ ತೆಗೆದುಕೊಂಡು ನಿಮಗೇ ಒರೆಸಿಹೋಗತಕ್ಕ ಸಾಧ್ಯತೆ ಇದೆ. ಒಂದು ಕಡೆ ಎಸ್ಟೇಟ್ ಏಜೆನ್ಸಿಯಲ್ಲಿ ಗಳಿಸತಕ್ಕದ್ದು ಇನ್ನೊಂದು ಕಡೆ ನೇರವಾಗಿ ನೀವೇ ಗ್ಯಾರಂಟಿ ಇದ್ದ ಕಾರಣ ನಾಳೆ ಹಣ ನೀವು ಕೊಡುತ್ತೀರಿ ಎಂದು ಬಂದಮೇಲೆ ಅದರ

ಬಗ್ಗೆಯೂ ಕೂಡ....

ಶ್ರೀ ಎಂ.ಸಿ.ನಾಣಯ್ಯ: ಬ್ಯಾಂಕಿನಿಂದ ತೆಗೆಯುತ್ತಾ ಇರತಕ್ಕ ಹಣಕ್ಕೆ ರಾಜ್ಯ ಸರ್ಕಾರದವರು ಗ್ಯಾರಂಟಿ ಕೊಡುತ್ತಾರೆಂದು ಯಾರು ಹೇಳಿದರು? From where did you get this information?

SRI M.MALLIKARJUNA KHARGE:- That is the impression becaus we don't know the MOU. We do not know what is the Memorandum of Understanding? That's why we are asking.

SRI M.C.NANAIAH:- Don't try to go under presumptions. Actually he is borrowing some loan from the Bank and the State Government is standing as guarantee. From where did you get this new thing?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆ ವಿಷಯ ಈ ಸದನಕ್ಕೆ ಗೊತ್ತಾಗಬೇಕಲ್ಲಾ.

SRI M.C.NANAIAH:- How could such a thing happen?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಯಾವುದೇ ಒಂದು ಫರ್ಮ್ ಮೇಲೆ ನೇರವಾಗಿ ಇವತ್ತು ಆಪಾದನೆ ಮಾಡುತ್ತಿಲ್ಲ. ನಾನು ಆಪಾದನೆ ಮಾಡತಕ್ಕದ್ದು ಏನೆಂದರೆ ನಿಮ್ಮ ಮೆಮೋರ್‍ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ನಲ್ಲಿ ಏನೇನು ಕಂಡೀಷನ್ಸ್ ಇವೆ ಎಂಬುದು ಗೊತ್ತಾಗಬೇಕಾಗಿದೆ ಇದು ಒಂದು. ಆ ಕಂಡೀಷನ್ಸ್‌ನ್ನು ನಿಮಗೂ ಅನುಕೂಲವಾಗತಕ್ಕ ರೀತಿಯಲ್ಲಿ ಹಾಕಿದೆಯೋ ಹೇಗೆ? ಮೂರನೆಯದು ಎಂದರೆ ರಸ್ತೆಯಲ್ಲಿ ನಮ್ಮ ಜನ ಓಡಾಡಬಹುದೋ ಇಲ್ಲವೋ? ಏಕೆಂದರೆ ನಾಳೆ ಟೋಲ್ ಎಂದರೆ ರೈತರು ಎಲ್ಲರೂ ಅದರಮೇಲೆ ಹೋಗುವಾಗ ದುಡ್ಡು ಕೊಟ್ಟು ಹೋಗಿ ಎಂದರೆ ನಾಳೆ ದೊಡ್ಡ ಅನಾಹುತವಾಗುತ್ತದೆ. ಅದಕ್ಕಾಗಿ ನಿಮ್ಮ ರಸ್ತೆ ವಿಚಾರ, ಹಳೇ ರಸ್ತೆ ವಿಚಾರ ಎಲ್ಲವನ್ನೂ ಸವಿಸ್ತಾರವಾಗಿ ಸದನದ ಮುಂದೆ ಇಡಬೇಕು. ಈ ಕಲ್ಯಾಣಿ ಫರ್ಮ್ ಹೊಸದೇನಲ್ಲ. ಅದೂ ಕರ್ನಾಟಕದವರದ್ದೇ. ಪೂನಾದಲ್ಲಿ ಅವರ ಫ್ಯಾಕ್ಟರಿ ಇದೆ. ಮೈಸೂರಿನಲ್ಲಿ ಫ್ಯಾಕ್ಟರಿ ಇದೆ. ಎಲ್ಲಾ ಕಡೆಯೂ ಒಳ್ಳೆಯ ಹೆಸರು ಇರತಕ್ಕ ವ್ಯಕ್ತಿಗಳಿದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ಅದೇ ಒಂದು ನೆಪದಲ್ಲಿ 20 ಸಾವಿರ ಎಕರೆ ನಾವು ತೆಗೆದುಕೊಂಡು ಕೊಟ್ಟು, ಒಂದು ಕಡೆ ರೈತನ ಜಮೀನು ಅವನ ಕೈಯಲ್ಲಿ ಕೊಟ್ಟು ಎಸ್ಟೇಟ್ ಏಜೆನ್ಸಿ ಬಿಸಿನೆಸ್‌ಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅದಕ್ಕಾಗಿ ಎಕ್ಸ್‌ಪ್ರೆಸ್

ಹೈವೇನೇ ಒಂದು ವಿಷಯ. ಸೆಟಲೈಟ್ ಟೌನ್‌ದೇ ಇನ್ನೊಂದು ವಿಷಯ. ಅದಕ್ಕೆ ದಯವಿಟ್ಟು ನಿಮ್ಮ ಕಂಡೀಷನ್ಸ್ ಏನಿದೆ ಎಂಬುದನ್ನು ಇಲ್ಲಿ ಪ್ರಸ್ತಾಪ ಮಾಡಬೇಕು. ಇದರಲ್ಲಿ ನಿಷ್ಪಕ್ಷಪಾತವಾಗಿ ಈ ಒಂದು ಪ್ರಾಜೆಕ್ಟ್ ಅಸ್ತಿತ್ವಕ್ಕೆ ಬರಬೇಕು ಎಂಬುದು ನಿಮ್ಮ ಅಪೇಕ್ಷೆಯಿದ್ದರೆ ಜಾಯಿಂಟ್ ಹೌಸ್ ಕಮಿಟಿ ಮಾಡಿ. ಅದರ ಮುಂದೆ ಇದೆಲ್ಲಾ ಇಟ್ಟು ಸದನಕ್ಕೆ ಕೊಟ್ಟರೆ ಖಂಡಿತವಾಗಿ ಇದರಲ್ಲಿ ಯಾರಿಗೂ ಸಂಶಯ ಬರುವುದಿಲ್ಲ. ತೊಂದರೆಯೂ ಕೂಡ ಇರುವುದಿಲ್ಲ. ಮತ್ತು ನಿಮ್ಮ ಮೇಲೆ ವೇಗೆ ಆಗಿ ಛಾರ್ಜ್ ಮಾಡಿದಿರಿ ಎಂದು ಹೇಳಿದಿರಲ್ಲ ವೇಗೆ ಛಾರ್ಜ್ ಏತಕ್ಕೆ ಮಾಡುತ್ತೇವೆಂದರೆ ಎಂಟೈರ್ ಪ್ರೂಫ್ ಇಲ್ಲದೇ ಇರುವುದರಿಂದ. ಪ್ರೂಫ್ ಬಂದಮೇಲೆ ನ್ಯಾಚುರಲ್ಲಾಗಿ ನೋಟೀಸ್ ಕೊಟ್ಟು ಇಂಥ ಮಿನಿಸ್ಟರ್ ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎಂದು ಬೇಕಾದರೆ ಆಗ ಕೊಡೋಣ.

ಶ್ರೀ ವಾಟಾಳ್ ನಾಗರಾಜ್: ಈಗ ಮೈಸೂರು ಬೆಂಗಳೂರು ಸೂಪರ್ ಹೈವೇ....

ಅಧ್ಯಕ್ಷರು: ಬಸಪ್ಪನವರು ಏನೋ ಹೇಳುತ್ತಿದ್ದಾರೆ.

+ ಶ್ರೀ ಎಂ.ಬಸಪ್ಪ (ಜಗಳೂರು): ಸನ್ಮಾನ್ಯ ಅಧ್ಯಕ್ಷರೇ, The Express Highway between Bangalore and Mysore consist of about 110 KMs which is a straight length and they are connecting the loopholes in Mysore and Bangalore Cities to the extent of 10 KMs on either side. That means, the total length of the Express Highway will be about 125 to 130 KMs. The amount spent for this National Highway is about Rs.2000 Crores. The land required for the Express Highway for the entire length is 7000 acres. The Satellite Towns formation needs 13000 acres. That means the land required for the Express Highway is only about 7000 acres whereas for the formation of Satellite Towns about 13,000 acres is required. In this regard, I can say that the formation of Satellite Towns is the main object of the Government than making the Express Highway. Secondly, the speed designed for this Highway is 150 KMs. The width of the Highway they are going to acquire is 90 Meters, say about 300 Meters width for the Highway. The existing road that is now running between

Bangalore and Mysore can be converted into an Express Highway by improving the horizontal curves and vertical curves and when it comes to villages, barrication is there throughout. But the Express Highway will not allow any pedestrian or movement of cattle in the Highway because it is purely for the automobile movement. Hence the existing Highway without going for the acquisition of land, the existing Highway is about 150 Feet width, on either side of the Express Highway if you acquire another 75 Feet we can form a free Express Highway with less use of the land. ಇದರಲ್ಲಿ ನಾನು ಏನು ಹೇಳುತ್ತೇನೆಂದರೆ ಎಗ್ಸಿಸ್ಟಿಂಗ್ ಹೈವೇಯನ್ನು ಮಾಡುವುದರಿಂದ We can accommodate any number of traffic that is now generating. ಈಗ ನ್ಯಾಷನಲ್ ಹೈವೇ ನಂಬರ್-4ರಲ್ಲಿ ಇರತಕ್ಕ ಟ್ರಾಫಿಕ್ ಇವತ್ತಿನದಿವಸ ಬೆಂಗಳೂರು-ಮೈಸೂರು ರಸ್ತೆಯಲ್ಲಿಲ್ಲ. The density of traffic is more in NH 4 than in Bangalore-Mysore Road.... ಅದಕ್ಕೋಸ್ಕರ ನಾವು 20 ಸಾವಿರ ಎಕರೆ ಜಮೀನನ್ನು ಕೊಂಡುಕೊಂಡು ಅವರಿಗೆ 30 ವರ್ಷ ಟೋಲ್ ಕಲೆಕ್ಟ್ ಮಾಡಲು ಅಧಿಕಾರ ನೀಡಬೇಕೇ? ಈ 30 ವರ್ಷದಲ್ಲಿ ಹಳೇ ರೋಡನ್ನೂ ಯಾರೂ ಉಪಯೋಗಿಸಿಕೊಳ್ಳಬಾರದು, ಅದನ್ನು ಕಂಪ್ಲೀಟಾಗಿ ಕಟ್ ಮಾಡುತ್ತಾರಂತೆ. No vehicle is allowed to move in this old road.

ಶ್ರೀ ಸಿ.ಎಂ.ಉದಾಸಿ: ಊಹೆಯ ಮೇಲೆ ಮಾತನಾಡಿದರೆ ಬಹಳ ಕಷ್ಟ. ಆ ರಸ್ತೆಗಳಿಗೆ....

ಶ್ರೀ ಕಾಗೋಡು ತಿಮ್ಮಪ್ಪ: ಎಲ್ಲಾ ಊಹೆ ಮಾಡಿ ಹೇಳುತ್ತಿಲ್ಲ. There are relevant points he has made.

ಶ್ರೀ ಸಿ.ಎಂ.ಉದಾಸಿ: ಸಭಾಧ್ಯಕ್ಷರೆ, ಅವರು ಹೇಳುತ್ತಾ ಇರುವುದು ಈಗಿರತಕ್ಕ ರಸ್ತೆ ಮೇಲೆ ವಾಹನಗಳು ಓಡಾಡದಂತೆ ನಿಷೇಧಿಸುತ್ತಾರೆ ಎಂಬ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು: ಅವರು ಹೇಳಲಿ. ಆಮೇಲೆ ಉತ್ತರ ಹೇಳಿ. ಬಸಪ್ಪನವರೇ ಹೇಳಿ.

ಶ್ರೀ ಎಂ.ಬಸಪ್ಪ: ಎಗ್ಸಿಸ್ಟಿಂಗ್ ಹೈವೇಯನ್ನು ಜಾಮಿಟ್ರಿಕಲ್ ಇಂಪ್ರೂಮೆಂಟ್‌ನಿಂದ ಸೂಪರ್‌ಹೈವೇ ಮಾಡಬಹುದು. ಫ್ರೀ ಹೈವೇ ಅದೂ ಕೂಡ ಯಾವ ವಿಧದಲ್ಲೂ

ಒಂದು ಯೂನಿಫಾರಂ ಆಗತಕ್ಕ ರೋಡಿಗೆ ಯಾವರೀತಿಯಲ್ಲೂ ಕಡಿಮೆಯಾಗುವುದಿಲ್ಲ. ಆದ್ದರಿಂದ ನಾನು ಹೇಳತಕ್ಕದ್ದು ಎರಡು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಬದಲು, ಮುಖ್ಯವಾಗಿ 20 ಸಾವಿರ ಎಕರೆ ವ್ಯಾಲ್ಯುಬಲ್ ಜಮೀನುಗಳನ್ನು ಅವರಿಗೆ ಇಂಡಸ್ಟ್ರೀಯಲ್ ಪರ್ಪಸ್‌ಗೆ ಎಂದು ಅಕ್ವೈರ್ ಮಾಡಿ ಅವರಿಗೆ ಕೊಡಬೇಕಂತೆ. ಬೇರೆ ಪರ್ಪಸ್‌ಗೆ ನಾವು ಅಕ್ವೈರ್ ಮಾಡುವುದಕ್ಕೆ ಹೋದರೆ ಲ್ಯಾಂಡ್ ಬಿಡುವುದಿಲ್ಲ ಎಂದರೆ ಕೋರ್ಟಿಗೆ ಮತ್ತೆ ಹೋಗುವುದಕ್ಕಾಗುವುದಿಲ್ಲ, ನಾವು ಅಕ್ವೈರ್ ಮಾಡಬಹುದು ತಕ್ಷಣ ಎಂಬ ದೃಷ್ಟಿಯಿಂದ ಈ ರೀತಿ ಮಾಡುತ್ತಿದ್ದಾರೆ. ಇದು ತಪ್ಪು ಎಂದು ನನ್ನ ಭಾವನೆ.

\+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಬೆಂಗಳೂರು-ಮೈಸೂರು ಸೂಪರ್ ಹೈವೇ. ಅದರಲ್ಲಿ ಓಡಾಡತಕ್ಕ ಅವರದೇ ಆದಂಥ ಜನಸಂಖ್ಯೆ. ಅದನ್ನು ನೀವು ತೀರ್ಮಾನ ಮಾಡುತ್ತೀರಿ. ಅದಕ್ಕೆ ಏನೋ ಒಂದು ತೆರಿಗೆ ಹಾಕುತ್ತೀರಿ. ಎಷ್ಟು ಕೊಡಬೇಕೆಂದು ಹೇಳುತ್ತೀರಿ. ಅದರಂತೆ ಛಾರ್ಜ್ ಕಟ್ಟಬೇಕಾಗುತ್ತದೆ. ಆ ರಸ್ತೆಯಲ್ಲಿ ಓಡಾಡತಕ್ಕ ವ್ಯಕ್ತಿಗೆ ಎಷ್ಟು ತೆರಿಗೆ ಬೀಳುತ್ತದೆ ಎಂಬ ಬಗ್ಗೆ ಇವತ್ತಿನವರೆಗೂ ಆ ಅಂಕಿಅಂಶ ಇಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಎಷ್ಟು ತೆರಿಗೆ ಆ ರಸ್ತೆಯಲ್ಲಿ ಓಡಾಡತಕ್ಕವರಿಗೆ, ಅದು ಬಿಟ್ಟರೆ ಸಾಮಾನ್ಯ. ನಾವು ಸಮಾಜವಾದಿ ಸಿದ್ಧಾಂತ ಎಲ್ಲಾ ಹೇಳುತ್ತಾ ಇರುತ್ತೇವೆ. ಒಂದು ಕಡೆ ಹಣ ಕೊಟ್ಟು ತೆರಿಗೆದಾರರು ಹೋಗತಕ್ಕ ರಸ್ತೆ; ತೆರಿಗೆ ಇಲ್ಲದೆ ಓಡಾಡತಕ್ಕ ರಸ್ತೆ ಇನ್ನೊಂದು ಕಡೆ. 50ನೇ ವರ್ಷದ ಸ್ವಾತಂತ್ರ್ಯೋತ್ಸವ ಆಚರಣೆ ಮಾಡುವ ಸಂದರ್ಭಧಲ್ಲಿ ಸೂಪರ್ ಹೈವೇ ರಸ್ತೆ ಮಾಡಿ ಅದರಲ್ಲಿ ಓಡಾಡತಕ್ಕ ಸೂಪರ್ ಜನ ಬೇರೆ, ಇದರಲ್ಲಿ ಓಡಾಡತಕ್ಕ ಜನ ಬೇರೆ ಎಂದು ಎರಡು ವರ್ಗ ಮಾಡುತ್ತೇವೆ ನಾವು. ನಮ್ಮ ನಾಗರಿಕರಲ್ಲೇ ಒಂದು ವರ್ಗ ಅದು, ಒಂದು ವರ್ಗ ಇದು ಎಂದು ಮಾಡುತ್ತೇವೆ. ಇದಿರಲಿ. ಮತ್ತೊಂದು ವಿಚಾರ ತಮಗೆ ಹೇಳುತ್ತೇನೆ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ತೀರ್ಮಾನ ತೆಗೆದುಕೊಳ್ಳತಕ್ಕ ವಿಚಾರ ಬಂದಾಗ ಈ ಸದನದಲ್ಲಿ ಇದು ಸಮಗ್ರವಾಗಿ ಚರ್ಚೆಯಾಗಬೇಕು. ಪ್ರತಿಯೊಂದು ಏನೇನು ಮಾಹಿತಿಗಳು ನಿಮ್ಮಲ್ಲಿ ಇವೆ, ಯಾವರೀತಿ ನೀವು ಒಪ್ಪಂದಕ್ಕೆ ಸಹಿಹಾಕಿದ್ದೀರಿ, ಆ ಒಪ್ಪಂದದ ಕರಾರುಗಳು ಏನು? ಶರತ್ತುಗಳು ಏನು? ಇದೆಲ್ಲಾ ಸಮಗ್ರವಾಗಿ ಚರ್ಚೆಯಾಗಬೇಕು. ಚರ್ಚೆಯಾಗದೆ ನೀವು ಗೋಪ್ಯವಾಗಿಟ್ಟು ನೀವೇನೀವೇ ಮಾಡತಕ್ಕಂಥ ರೀತಿಯಿಂದ ಏನಾಗಿದೆ ಎಂದರೆ ಈ ರಾಜ್ಯದ ಜನತೆಯನ್ನು ಕತ್ತಲಲ್ಲಿ ಇಡತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಈ ದೃಷ್ಟಿಯಿಂದ ನಾನು ತಮಗೆ ಹೇಳುತ್ತಿದ್ದೇನೆ ಏನೆಂದರೆ ಇದನ್ನು ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಒಂದು ಅವಕಾಶವನ್ನು ಮಾನ್ಯ ಅಧ್ಯಕ್ಷರ ಮೂಲಕ ತಾವು ಪಡೆದು ಚರ್ಚೆ ವಸ್ತುವಾಗಿ ಇದನ್ನು ತೆಗೆದುಕೊಂಡು ಬರಬೇಕಾದ್ದು ತಮ್ಮ ಕರ್ತವ್ಯ ಇದೆ. ಮತ್ತೆ 25 ಸಾವಿರ ಎಕರೆ ಪ್ರದೇಶವನ್ನು ರೈತರಿಂದ ನೀವು ಪಡೆದರೆ ಮುಂದೆ ಆ ರೈತರ ಪರಿಸ್ಥಿತಿ ಏನು? ಅವರ ಜೀವನದ ಸಮಸ್ಯೆ ಏನು?

ಅಲ್ಲಿ ನಡೆಯತಕ್ಕಂಥ ಪರಿಸ್ಥಿತಿ ಏನು? ಅದು ಬೆಳೆ ಹೋಗಿ ಅವನು ಆನಂತರ ಜೀವನ ಮಾಡುವುದು ಹೇಗೆ? ಅವನಿಗೆ ಕೊಡತಕ್ಕಂಥ ಹಣ ಎಷ್ಟು? ಇವೆಲ್ಲಾ ಅನೇಕ ವಿಚಾರಗಳು ಇವೆ. ಆದ್ದರಿಂದ ಇದು ಒಂದು ರೀತಿಯ ದೊಡ್ಡ ಹಗರಣ ಆಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಈ ರೈತರ ಪರಿಸ್ಥಿತಿ ಏನಾಗುತ್ತದೆ, ಅವರ ಭವಿಷ್ಯ ಏನು ಎಂದು ತಾವು ತೀರ್ಮಾನ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಎಲ್ಲವನ್ನೂ ಸಮಗ್ರವಾಗಿ ಚರ್ಚೆ ಮಾಡಬೇಕಾಗಿದೆ. ಮೊದಲನೆಯದಾಗಿ ಈ ಸೂಪರ್ ಹೈವೇ ಬೇಕೇ ಬೇಡವೇ ಎನ್ನತಕ್ಕದ್ದು ಒಂದು ನಿರ್ಧಾರ. ಈ ಸೂಪರ್‌ಹೈವೆ ಬೇಕೇ ಎಂಬುದು ನನ್ನ ನೇರವಾದ ಪ್ರಶ್ನೆ. ನನಗನ್ನಿಸುತ್ತದೆ ಇಂತಹ ಅವಶ್ಯಕತೆ ಇದೆಯೆಂದು ನಾನು ಅಂದುಕೊಂಡಿಲ್ಲ. ಸೂಪರ್‌ಹೈವೇ ಮಾಡಿ ನೀವು ಅವರಿಂದ ಹಣ ವಸೂಲು ಮಾಡುವುದು ಬೇಕಾಗಿಲ್ಲ. ಈಗಾಲಾದರೂ ನಮ್ಮ ಕೆಲವು ಸ್ನೇಹಿತರು ಹೇಳಿದ ರೀತಿಯಲ್ಲಿ ಮತ್ತೆ ನಾಲ್ಕು ಎಲೆಕ್ಟ್ರಿಕ್ ಟ್ರೇನ್ ಮೈಸೂರು ಬೆಂಗಳೂರು ನಡುವೆ ಹಾಕಿದರೆ ನನಗನ್ನಿಸುತ್ತದೆ ಎಷ್ಟೋ ಒತ್ತಡ ಕಡಿಮೆಯಾಗುತ್ತದೆ. ಎರಡು ಎಲೆಕ್ಟ್ರಿಕ್ ಟ್ರೇನ್‌ನ್ನು ಹಾಕುವುದಾದರೆ ಬಹಳ ಒತ್ತಡ ಕಡಿಮೆಯಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಈ ಸೂಪರ್‌ಹೈವೇ ದೃಷ್ಟಿಯಿಂದ ಆಗತಕ್ಕಂಥ ದುರಂತಗಳು, ಅನಾಹುತ ಮತ್ತು ರೈತರ ಮೇಲೆ ಆಗತಕ್ಕಂಥ ಪರಿಣಾಮವನ್ನು ತಪ್ಪಿಸಬೇಕಾದರೆ ನೀವು ಸಮಗ್ರವಾಗಿ ಚರ್ಚೆಮಾಡಿ ಒಂದು ನಿರ್ಧಾರಕ್ಕೆ ಬರಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್: ಅಧ್ಯಕ್ಷರೇ......

ಅಧ್ಯಕ್ಷರು: ಸಾತನೂರಿಗೆ ಇದೇನೂ ಬರುವುದಿಲ್ಲ.

+ ಶ್ರೀ ಡಿ.ಕೆ.ಶಿವಕುಮಾರ್ (ಸಾತನೂರು): ಅಧ್ಯಕ್ಷರೇ, ಒಂದೇ ನಿಮಿಷ. ಈಗ ಮಾನ್ಯ ಯಡಿಯೂರಪ್ಪನವರು, ಖರ್ಗೆಯವರು ಎಲ್ಲರೂ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿ ಅವರು ಎರಡೇ ಎರಡು ವಿಚಾರಗಳನ್ನು ನಮಗೆ ಮನದಟ್ಟು ಮಾಡಿಕೊಡಬೇಕು. ಹಿಂದೆ ಕಲ್ಯಾಣಿ ಕನ್‌ಸ್ಟ್ರಕ್ಷನ್ ಗ್ರೂಪ್‌ಗೆ ಎಂ.ಒ.ಯು. ಅಗ್ರಿಮೆಂಟ್ ಸೈನ್ ಆಗಿತ್ತು. ಈಗ ಅವರದ್ದೇ ಆದ ಸಿಸ್ಟರ್ ಕಂಪನಿಗೆ ಎಂ.ಒ.ಯು. ಅಗ್ರಿಮೆಂಟ್ ಸೈನ್ ಆಗಿದೆ. ಅವರೆಡೂ ಕಂಪನಿಗಳಲ್ಲಿ ಇರತಕ್ಕಂಥ ಬೋರ್ಡ್ ಆಫ್ ಡೈರೆಕ್ಟರುಗಳ ಹೆಸರುಗಳು ಏನು? ಅವರ ಅಡ್ರೆಸ್ ಏನು? ಹಿಂದೆ ಏನು ಅಗ್ರಿಮೆಂಟ್ ಮಾಡಿದ್ದರು? ಈಗ ಅಗ್ರಿಮೆಂಟ್ ಏನು ಮಾಡಿದ್ದಾರೆ? ಯಾರ್‍ಯಾರಿಗೆ ಎಷ್ಟೆಷ್ಟು ಶೇರು ಇದೆ. ಮೂರನೇಯದು, ಈ ಒಂದು ಹೌಸಿಂಗ್ ಪ್ರಾಜೆಕ್ಟ್‌ಗೆ ಅಕ್ವಿಸಿಷನ್ ಮಾಡಬೇಕಾದರೆ ನೀವು ಯಾವ ಕ್ಲಾಸ್ ಹಾಕುತ್ತಿದ್ದೀರಿ? ರಸ್ತೆಗೆ ಯಾವ ಕ್ಲಾಸ್ ಹಾಕುತ್ತಿದ್ದೀರಿ? ಇದನ್ನು ತಾವು ಮನವರಿಕೆ ಮಾಡಿಕೊಟ್ಟರೆ ಸಾಕು.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೇ....

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಲಿ. ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ನಾನೇನು ಹೇಳಿದೆ? ಅವರ ಉದ್ದೇಶ ಇದರ ಒಳಗೆ ಹೊರಗೆ ಏನೂ ಇಲ್ಲ ಅಂತ ಜನರಿಗೆ ಸಾಬೀತು ಆಗಬೇಕು, ಜನತೆಯ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಮಾಡುತ್ತಿದ್ದೇವೆ ಎಂದರೆಹಿಂದಿನ ಒಂದು ಟೆಂಡರ್ ಕಾಪಿ, ಫೀಸಿಬಿಲಿಟಿ ರಿಪೋರ್ಟ್ ಡಿಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್ ಹೈಪವರ್ ಕಮಿಟಿ ರಿಪೋರ್ಟ್, ಅಗ್ರಿಮೆಂಟ್ ಕಾಪಿ, ಪಾರ್ಟನರ್‌ಶಿಪ್‌ನಲ್ಲಿ ಯಾರ್ಯಾರು ಇದ್ದಾರೆ, ಈ ಎಲ್ಲಾ ವಿವರಗಳನ್ನು ನೀವು ಒದಗಿಸಿಕೊಟ್ಟರೆ ನಾವು ಅದನ್ನು ಅಭ್ಯಾಸ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಆಗುತ್ತದೆ. ಇಲ್ಲದಿದ್ದರೆ ಈ ಮನೆಯಲ್ಲಿ ನಮಗೆ ಗೊತ್ತಿಲ್ಲದೇನೇ ಜಗತ್ತಿನಲ್ಲಿ ಏನೂ ನಡೆಯದೇ ಇರುವಂಥ ನಮ್ಮ ದೇಶದಲ್ಲಿ ಯಾವುದೋ ರಾಜ್ಯದಲ್ಲಿ ಇರುವಂಥ ರೀತಿಯಲ್ಲಿ ಎರಡು ಸಾವಿರ ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿದೆ, ನಮಗೆ ಅದರ ವಿವರಗಳೇ ಗೊತ್ತಿಲ್ಲ. ಅದರ ಬಗ್ಗೆ ಗೊತ್ತಿಲ್ಲದೆ ನಾವು ಚರ್ಚೆ ಮಾಡುತ್ತಿದ್ದೇವೆ. ಅದು ಆಗಬಾರದು ಎಂದು ಇದ್ದರೆ ನೀವು ಉತ್ತರ ಕೊಡುವಾಗ ಎಲ್ಲಾ ದಾಖಲೆಗಳನ್ನು ಕೊಡಿ; ಚರ್ಚೆ ಮಾಡೋಣ. ಖರ್ಗೆಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕಮಿಟಿ ಮಾಡಿ ಎಂದು ಅವರು ಹೇಳಿದರು. ನಾನು ಅದಕ್ಕೆ ಸಿದ್ಧನಿಲ್ಲ. ಕಮಿಟಿ ಬೇಡ. ಈ ಸೆಟ್‌ಲೈಟ್ ಟೌನ್ ಆದಮೇಲೆ ನಮ್ಮ ರೈತರು, ಮಕ್ಕಳು ಯಾರು ಜಮೀನು ಕಳೆದುಕೊಂಡು ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ, ಆ ಕೋಟ್ಯಾಧಿಪತಿಗಳ ಮನೆಗೆ ಹೋಗಿ ಅಲ್ಲಿ ಪಾತ್ರೆ ತೊಳೆದುಕೊಂಡು, ಜವಾನರ ಕೆಲಸ ಮಾಡುವುದೂ ಬೇಡ. ಅವರು ಗೌರವದಿಂದ ಬದುಕಲಿ. ರೋಡ್ ಮಾಡುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ನೀವು ಮಾಡಿ ಅಥವಾ ಯಾರು ಬರುತ್ತಾರೋ ಅವರು ಮಾಡೋಣ. ಸರ್ಕಾರವೇ ಇದರ ಜವಾಬ್ದಾರಿ ತೆಗೆದುಕೊಳ್ಳಲಿ. ಟೋಲ್ ಸಂಗ್ರಹ ಮಾಡುವುದಕ್ಕೆ 30 ವರ್ಷ ಏನು ಕೊಡುತ್ತಿದ್ದೀರಿ, ಅದು 50 ವರ್ಷ ಬೇಕಾದರೆ ಕೊಡಿ. ಅದಕ್ಕೆ ನಮ್ಮ ವಿರೋಧ ಇಲ್ಲ.

+ ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಆತಂಕ ವ್ಯಕ್ತಪಡಿಸಿರುವ ಬಗ್ಗೆ, ಕೆಲವು ಆರೋಪಗಳನ್ನು ಮಾಡಿರುವುದರ ಬಗ್ಗೆ ವಿವರವಾಗಿ ಚರ್ಚೆ ಮಾಡುವುದು ಅವಶ್ಯಕವೆಂದು ನಾನು ಭಾವಿಸಿಕೊಂಡಿದ್ದೇನೆ. ಕೆಲವರು ಇದರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲದೇನೇ ಅಥವಾ ತಪ್ಪು ಮಾಹಿತಿಯಿಂದ ಸಹ ಇಲ್ಲಿ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ಭಾವಿಸುತ್ತೇನೆ. ಈ ರಸ್ತೆಗಳನ್ನು ಮಾಡಬೇಕಾದಾಗ, ಈ ಎಕ್ಸಪ್ರೆಸ್ ಹೈವೇಗೆ ಈ ಮೊದಲು ಒಂದು ಸಲ ಹಿಂದೆ 1987ರಲ್ಲಿಯೇ ಒಂದು ಟೆಂಡರ್ ಕರೆಯಲಾಗಿತ್ತು. ಇದೇ ರೀತಿ ಎಕ್ಸ್‌ಪ್ರೆಸ್ ಹೈವೇ ಮಾಡುವ ಸಲುವಾಗಿ ಆ ಸಂದರ್ಭದಲ್ಲಿ ಹತ್ತು ಜನ ಟೆಂಡರ್ ಫಾರ್ಮ್ ತೆಗೆದುಕೊಂಡಿದ್ದರು. ಅವರಲ್ಲಿ ಒಬ್ಬರೇ

ಒಬ್ಬರು ಕಲ್ಯಾಣಿ ಗ್ರೂಪಿನ ಪರವಾಗಿ ಆ ಸಂದರ್ಭದಲ್ಲಿ ಖೋಡೆ ಗ್ರೂಪ್‌ನವರು ಟೆಂಡರ್ ಫಾರ್ಮನ್ನು ಕೊಟ್ಟಿದ್ದರು. ಅವರು 60 ವರ್ಷಗಳವರೆಗೆ ಈ ರಸ್ತೆಯನ್ನು ಮಾಡಿ ಟೋಲ್ ಕಲೆಕ್ಟ್ ಮಾಡುವ ಸಲುವಾಗಿ ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಒಂದು ಕಂಡೀಷನ್ ಹಾಕಿದ್ದರು. ಅಂದರೆ ಈ ರಸ್ತೆಯನ್ನು 60 ವರ್ಷಗಳವರೆಗೂ ಟೋಲ್ ಕಲೆಕ್ಟ್ ಮಾಡಬೇಕಾದಂಥ ಸಂದರ್ಭದಲ್ಲಿ ಬೆಂಗಳೂರು ಮೈಸೂರು ನಡುವೆ ಈಗ ಇರುವಂಥ ರಸ್ತೆಯನ್ನು ಯಾವುದೇ ಕಾರಣಕ್ಕೆ ಸುಧಾರಣೆ ಮಾಡಬಾರದು ಎನ್ನುವಂಥ ಕಂಡೀಶನ್‌ನ್ನು ಹಾಕಿದ್ದರು. ಜೊತೆಗೆ ಇದಕ್ಕೆ ಬೇಕಾಗಿರತಕ್ಕಂಥ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಕೊಡಬೇಕಾದ ಕೆಲಸದಲ್ಲಿ ಸರ್ಕಾರವೇ ಭೂಮಿಯನ್ನು ಕೊಡಬೇಕು ಎನ್ನುವಂಥ ಕೇಳಿಕೆಯನ್ನೂ ಸಹಿತ ಅವರು ಇಟ್ಟರು. ಇದು ಹೀಗೆ ಇರಬೇಕಾದಾಗ ಮತ್ತೆ ಇದಕ್ಕೆ 1995ರಲ್ಲಿ ಒಂದು ಎಂ.ಒ.ಯು.ಗೆ ಸೈನ್ ಮಾಡಿ ಅಮೇರಿಕಾದ ಸಂಸ್ಥೆ ಮತ್ತು ಕಲ್ಯಾಣಿ ಗ್ರೂಪ್‌ನವರು ಸಹಯೋಗದಿಂದ ಈ ಒಂದು ಬಿ.ಒ.ಒ.ಟಿ. (Build-Own operate and Transfer) ಆಧಾರದ ಮೇಲೆ ಒಂದು ಎಂ.ಒ.ಯು.ಗೆ ಸೈನ್ ಆಗಿತ್ತು. ಹಾಗೆ ಇದ್ದಾಗ ಇದಕ್ಕೆ ಬೇಕಾದ ಕೋರ್‌ಗ್ರೂಪ್ ಕಮಿಟಿ ಎಂದು ಒಂದು ಮಾಡಿ ಸಂಪೂರ್ಣವಾಗಿ ವಿವರವಾಗಿ ಚರ್ಚೆಮಾಡಿ ಪಾರದರ್ಶಕವಾಗಿ ಈ ವಿಚಾರವನ್ನು ತೆಗೆದುಕೊಂಡು ಸಂಪೂರ್ಣವಾಗಿ ಚರ್ಚೆ ನಡೆದಿದೆ. ಇಲಾಖೆಯ ಅಧಿಕಾರಿಗಳು ಈ ವಿಚಾವನ್ನು ತೆಗದುಕೊಂಡು ಸಂಪೂರ್ಣವಾಗಿ ಚರ್ಚೆ ನಡೆದಿದೆ. ಇಲಾಖೆಯ ಅಧಿಕಾರಿಗಳು ಇದರ ಬಗ್ಗೆ ಕೆ.ಎಸ್.ಎಸ್.ಐ.ಡಿ.ಸಿ. ಚೇರ್ಮನ್ ಅವರನ್ನು ಇದಕ್ಕೆ ಕೋರ್‌ಗ್ರೂಪ್‌ನ ಅಧಿಕಾರಿಯಾಗಿ ನೇಮಿಸಿ ಎಲ್ಲರ ಸಹಕಾರದಿಂದ ಚರ್ಚೆಮಾಡಿ ಒಂದು ಅಂತಿಮವಾದ ತೀರ್ಮಾನಕ್ಕೆ ಬಂದಿದ್ದರು. ಹಾಗೆ ಬಂದು ಇವತ್ತು ರಸ್ತೆಗಳ ನಿರ್ಮಾಣಕ್ಕೆ ನಾವು ಅನುಮತಿಯನ್ನು ಕೊಡುವುದಕ್ಕೆ ಹೊರಟಾಗ 20 ಸಾವಿರ ಎಕರೆ ಭೂಮಿಯನ್ನು ರಸ್ತೆಗಾಗಿ ಕೊಡುತ್ತಿದ್ದಾರೆ ಎನ್ನತಕ್ಕಂಥ ಅನುಮಾನವನ್ನು ತಾವು ವ್ಯಕ್ತಪಡಿಸುತ್ತಿದ್ದೀರಿ. ಆದರೆ ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. 20 ಸಾವಿರ ಎಕರೆ ಭೂಮಿ ಬೇಕಾಗುವುದಿಲ್ಲ. ಸುಮಾರು 6900 ಎಕರೆಯಷ್ಟು ಭೂಮಿ ಈ ರಸ್ತೆಗೆ ಈ ರಸ್ತೆಗೆ ಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವೂ ಅದನ್ನೇ ಹೇಳಿದ್ದು. ಏಳು ಸಾವಿರ ಎಕರೆ ಮಾತ್ರ ಬೇಕು. ಉಳಿದ 13 ಸಾವಿರ ಎಕರೆಯನ್ನು ನೀವು ಎಸ್ಟೇಟ್ ಏಜೆನ್ಸಿ ಬಿಸಿನೆಸ್ ಏಕೆ ಮಾಡಿದಿರಿ ಎಂದು ಕೇಳಿದ್ದೇವೆ.

ಶ್ರೀ ಸಿ.ಎಂ.ಉದಾಸಿ: ರಿಯಲ್ ಎಸ್ಟೇಟ್ ಬಿಸಿನೆಸ್ ಅಲ್ಲ. ನಾನು ಹೇಳುತ್ತಿದ್ದೇನೆ, ಮುಂದೆ ಕೇಳಿ. ಏಕೆ ಮಾಡಬೇಕು ಎಂಬುದನ್ನು ಮೊದಲು ತಿಳಿದುಕೊಳ್ಳೋಣ. ರಸ್ತೆ ಮಾಡಲಿಕ್ಕೆ ಅವರು ಖರ್ಚು ಮಾಡಬೇಕಾಗಿರುವ ಹಣ, ಎರಡು ಸಾವಿರ ಕೋಟಿ ರೂಪಾಯಿಗಳು.

ಶ್ರೀ ಕಾಗೋಡು ತಿಮ್ಮಪ್ಪ: ಎರಡು ಕಿಲೋಮೀಟರ್‌ಗೆ ಎಷ್ಟು ಹಣ ಬೇಕಾಗುತ್ತದೆ?

ಶ್ರೀ ಸಿ.ಎಂ.ಉದಾಸಿ: ಅದನ್ನು ವಿವರವಾಗಿ ಹೇಳುತ್ತೇನೆ ಕೇಳಿ. ಅದನ್ನೆಲ್ಲಾ ತಮಗೆ ವಿವರವಾಗಿ ಹೇಳಬೇಕೆಂದೇ ನಾನು ಇಲ್ಲಿ ಬಂದಿದ್ದೇನೆ. ರಸ್ತೆಗಳಿಗೆ ಖರ್ಚು ಮಾಡಬೇಕಾಗಿರುವ ಹಣ ಏನಿದೆ....

ಶ್ರೀ ಬಿ.ಎಸ್.ಯಡಿಯೂರಪ್ಪ: ಎಲ್ಲಾ ಸೇರಿಸಿ ಹೇಳಿ

ಶ್ರೀ ಸಿ.ಎಂ.ಉದಾಸಿ: ಎಲ್ಲಾ ಸೇರಿಸಿಯಲ್ಲ. ಎಕ್ಸಪ್ರೆಸ್ ವೇ ಗಾಗಿ 111 ಕಿಲೋಮೀಟರ್ ಅಲ್ಲದೇನೇ ಒಟ್ಟು 41 ಕಿಲೋಮೀಟರ್‌ನಷ್ಟು ಪೆರಿಫೆರಲ್ ರೋಡ್ ಇದೆ. ಅದು ಸುಮಾರು 164 ಕಿಲೋಮೀಟರ್ ರಸ್ತೆಗಳನ್ನು ಮಾಡುವ ಸಲುವಾಗಿ 888 ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಎಲಿವೇಟಡ್ ರೋಡ್‌ಗೆ 186 ಕೋಟಿ ರೂಪಾಯಿ ಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ಕಿಲೋಮೀಟರ್‌ಗೆ ಎಷ್ಟು ದುಡ್ಡು ಬೇಕು?

ಶ್ರೀ ಸಿ.ಎಂ.ಉದಾಸಿ: ನಾನು ಹೇಳುತ್ತಿದ್ದೇನೆ. ನೀವು ಪೂರ್ತಿಯಾಗಿ ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: 800 ಕೋಟಿ ಬೇಕು. ಒಂದು ಕಿಲೋ ಮೀಟರ್‌ಗೆ ಎಷ್ಟು ಬೇಕಾಗುತ್ತದೆ ಎಂದು ನೀವು ಲೆಕ್ಕಹಾಕಿ ಹೇಳಬೇಕಲ್ಲ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಂದು ಕಿಲೋಮೀಟರ್‌ಗೆ 18 ಕೋಟಿ.

ಶ್ರೀ ಸಿ.ಎಂ.ಉದಾಸಿ: ಈಗ ಬೆಂಗಳೂರು-ಹೊಸೂರು ರಸ್ತೆಗೆ ಒಂದು ಕಿಲೋಮೀಟರ್‌ಗೆ ಒಂದು ಕೋಟಿ ಖರ್ಚಾಗಿದೆ. ತಮಗೆ ಗೊತ್ತಿರಬಹುದು, ನಾಲ್ಕು ಲೈನ್ ರಸ್ತೆಗೆ 54 ಕೋಟಿಯಷ್ಟು ಆಗಿದೆ. ಇದು ಆರು ಲೈನ್ ಮಾಡಬೇಕು. ಮೂರೂವರೆ ಮೀಟರ್ ಎತ್ತರದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ. ಅದನ್ನು ಆರು ಲೈನ್‌ಗಳಾಗಿ ಪರಿವರ್ತನೆ ಮಾಡುವ ಯೋಜನೆಯನ್ನು ಇಟ್ಟುಕೊಂಡು ರಸ್ತೆಗಳನ್ನು ಮಾಡಿ ಅದು ಮೂವತ್ತು ವರ್ಷ ಬಳಸುವುದರ ಜೊತೆಗೆ ಮುಂದಿನ 30 ವರ್ಷಗಳಿಗೆ ಉಪಯೋಗ ಮಾಡುವುದಕ್ಕೆ ಇರುವಂಥ ಸ್ಥಿತಿಯಲ್ಲಿ ಬಿಟ್ಟು ಕೊಡುವ ಸಲುವಾಗಿ ಅವರು ಹಣ ಖರ್ಚುಮಾಡಬೇಕಾಗುತ್ತದೆ. ಇದು ಸಿಮೆಂಟ್ ರೋಡ್ ಮಾಡುತ್ತಾ ಇರುವುದರಿಂದ ಈ ರಸ್ತೆಗಳ ಬಗ್ಗೆ ಸಂಪೂರ್ಣವಾಗಿ ನೀವು ತಿಳಿದುಕೊಳ್ಳಿ ಎಂದು ನಾನು ಹೇಳುತ್ತಿರುವುದು. ವಿದೇಶಗಳಲ್ಲಿ ಈ ವ್ಯವಸ್ಥೆ ಎಲ್ಲಾ ಕಡೆಗೆ ಇದೆ. ಅಲ್ಲೆಲ್ಲ ಟೋಲ್ ರಸ್ತೆಗಳೇ ಹೆಚ್ಚಾಗಿ ಇರುವುದು. ನಮ್ಮ ರಾಷ್ಟ್ರದಲ್ಲಿ ಇತ್ತೀಚೆಗೆ ಮಾತ್ರ ಇಡೀ ದೇಶದಲ್ಲಿ ಈ ಯೋಜನೆಯನ್ನು ಜಾರಿಗೆ ತರುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ, ಗುಜರಾತಿನಲ್ಲಿ ಜಾರಿಗೆ ತರುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಸಹಿತ ಇಂತಹ ರಸ್ತೆಗಳನ್ನು

ಮಾಡಬೇಕು ಎನ್ನುವಂಥ ಗುರಿಯನ್ನು ಹೊಂದಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸೆಟ್‌ಲೈಟ್ ಟೌನ್‌ಗೆ ಜಮೀನು ಕೊಟ್ಟಿಲ್ಲ.

ಶ್ರೀ ಸಿ.ಎಂ.ಉದಾಸಿ: ಕೇಳಿ. ಸೆಟ್‌ಲೈಟ್ ಟೌನ್ ಏಕೆ ಬೇಕು ಎನ್ನುವುದರ ಬಗ್ಗೆ ಮುಂದೆ ನಾನು ಬರುತ್ತೇನೆ. ಸೆಟ್‌ಲೈಟ್ ಅಂದರೆ ಏನು ಎಂಬುದನ್ನು ಮೊದಲು ತಿಳಿದುಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸೆಟ್‌ಲೈಟ್ ಟೌನ್‌ಮಾಡಿ ಅವರಿಗೆ ದುಡ್ಡು ಗಳಿಸಿಕೊಳ್ಳಲಿಕ್ಕೆ ಅನುಕೂಲ ಮಾಡಿ ಕೊಡುತ್ತೇವೆ ಎಂದು ಹೇಳಿ.

ಶ್ರೀ ಸಿ.ಎಂ.ಉದಾಸಿ: ತಮಗೆ ಗೊತ್ತಿಲ್ಲ. ಏಕೆ ಕೇಳುತ್ತಿದ್ದಾರೆ ಅಂತಾನೂ ನಾನು ಹೇಳುತ್ತೇನೆ. ಎರಡು ಸಾವಿರ ಕೋಟಿ ರೂಪಾಯಿ ಖರ್ಚುಮಾಡಿದರೆ ಅದಕ್ಕೆ ಎರಡು ಸಾವಿರ ಕೋಟಿ ರೂಪಾಯಿಗೆ ಬಡ್ಡಿ ಎಷ್ಟು ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್: ನಿಜ ನಮಗೆ ಗೊತ್ತಿಲ್ಲ. ಅದಕ್ಕೆ ತಾವು ಮುಚ್ಚಿಟ್ಟಿದ್ದೀರಿ.

ಶ್ರೀ ಸಿ.ಎಂ.ಉದಾಸಿ: ಪೂರ್ತಿ ಕೇಳಿ. ಆಮೇಲೆ ನಿಮಗೆ ಬೇಕಾದ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ನಮಗೆ ಗೊತ್ತಿಲ್ಲ ಅಂದಲ್ಲ, ನಿಜ. ಪ್ರಾಮಾಣಿಕವಾಗಿ ನಮಗೆ ಗೊತ್ತಿಲ್ಲ. ಅದನ್ನು ತಾವು ಮುಚ್ಚಿಟ್ಟಿದ್ದೀರಿ ಎಂದು ನಾನು ಹೇಳಿದೆ.

(ಗೊಂದಲ)

2.10 ಪಿ.ಎಂ.

ಶ್ರೀ ಸಿ.ಎಂ.ಉದಾಸಿ: ಆಯಿತು ನಾನು ಹೇಳುವುದನ್ನು ತಾವು ಮೊದಲು ಪೂರ್ತಿಯಾಗಿ ಕೇಳಿ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಮಗೆ ಸ್ಯಾಟ್‌ಲೈಟ್ ಟೌನ್ ಅಂದರೆ ಏನು ಎಂದು ಗೊತ್ತಿಲ್ಲ ಅಂದರೆ ಹೇಗೆ?

(ಗೊಂದಲ)

ಶ್ರೀ ಸಿ.ಎಂ.ಉದಾಸಿ: ಸ್ಯಾಟ್‌ಲೈಟ್ ಟೌನ್ ಏಕೆ ಮಾಡುತ್ತೇವೆಂದು....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸ್ಯಾಟ್‌ಲೈಟ್ ಟೌನ್ ಏಕೆ ಮಾಡುತ್ತಿದ್ದೇನೆ, ಅದರಿಂದ ತಾವು ಅವರಿಗೆ ದುಡ್ಡನ್ನು ಕಾಂಪನ್‌ಸೇಟ್ ಮಾಡಿ ಕೊಡುತ್ತಿದ್ದೇವೆಂದು ಹೇಳಿ; ಗೊತ್ತಿಲ್ಲ ಎಂದು ಏಕೆ ಹೇಳುತ್ತೀರಿ? ನಿಮಗೆ ಸ್ಯಾಟ್‌ಲೈಟ್ ಟೌನ್ ಅಂದರೆ ಗೊತ್ತಿಲ್ಲ, ಎಕ್ಸ್‌ಪ್ರೆಸ್ ಅಂದರೆ ಗೊತ್ತಿಲ್ಲ....

ಅಧ್ಯಕ್ಷರು: ಖರ್ಗೆಯರೇ, ನೀವು ಮಂತ್ರಿಗಳಿಗೆ ಉತ್ತರ ಹೇಳುವುದಕ್ಕೆ ಅವಕಾಶ ಕೊಡಬೇಕು, ನೀವು ಹೇಳಿರುವುದನ್ನು ಅವರು ಕೇಳಿದ್ದಾರೆ..

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಗೊತ್ತಿಲ್ಲವೆಂದರೆ ಏನು ಅರ್ಥ?

ಅಧ್ಯಕ್ಷರು: ಇಲ್ಲಾ ನೀವೇ ಮತ್ತೆ ಉತ್ತರ ಹೇಳಬೇಕು.

(ಗೊಂದಲ)

ಅಧ್ಯಕ್ಷರು: ನಾನು ಹೆಚ್ಚಿಗೆ ವಿದೇಶಿಗಳಿಗೆ ಹೋದವನಲ್ಲ; ಹೋದ ವರ್ಷ ನಾನು ಕಾಮನ್ ವೆಲ್ತ್ ಪಾರ್ಲಿಮೆಂಟರಿ ಕಾನ್‌ಫರೆನ್ಸ್‌ಗೆ ಮಲೇಶಿಯಾಕ್ಕೆ ಹೋಗಿದ್ದೆ. ಸುಮಾರು 60ರ ದಶಕದಲ್ಲಿ ಮಲೇಶಿಯಾ ದೇಶ ನಮ್ಮ ಹತ್ತಿರ ಸಹಾಯಕ್ಕೆ ಬರುತ್ತಿದ್ದಂತಹ ದೇಶ. ಅಲ್ಲಿ ರಸ್ತೆಗಳನ್ನು ಟೋಲ್ ಪ್ರಕಾರ ಮಾಡಿರತಕ್ಕಂಥದ್ದು ನಾನು ನೋಡಿದೆ. ಅಂತರಾಷ್ಟ್ರೀಯ ಮಟ್ಟಕ್ಕೆ ಮಾಡಿರತಕ್ಕಂಥದ್ದು ಎಂದರೆ ಅಲ್ಲಿ ಗೋಡೆಯನ್ನು ಕಟ್ಟಿ ಬಿಡುತ್ತಾರೆ. ಸುಮಾರು ಮೂರುವರೆ ಅಡಿಯಷ್ಟು ಎತ್ತರದ ಮಾಮೂಲು ನಮ್ಮ ಸರ್‌ಫೇಸ್‌ಗಿಂತ ಮೇಲೆ ಬರುತ್ತದೆ, ಅದರ ಮೇಲೆ 150 ಕಿ.ಮೀ. ಗಂಟೆಗೆ ಪ್ರಯಾಣ ಮಾಡಬಹುದು. ಟೋಲ್ ಫಿಕ್ಸ್ ಮಾಡತಕ್ಕಂಥದ್ದು ಕೂಡ ಮತ್ತೊಬ್ಬರು, ಟೂರಿಸ್ಟರು, ಬಿಸ್‌ನೆಸ್ ಇರತಕ್ಕಂಥವರು ಅರ್ಜೆಂಟ್ ಹೋಗಬೇಕೆನ್ನುವರು ಅವರು ಅದರ ಬೆಲೆ ಕಟ್ಟಿ ಹೋಗಿ ಬರುತ್ತಾರೆ. ನಾವು ಪ್ರಪಂಚದ ಇತರ ಭಾಗದಲ್ಲಿರತಕ್ಕಂಥವರ ಜೊತೆಯಲ್ಲಿ ಕಾಂಪಿಟ್ ಮಾಡಬೇಕು ಅವರ ಮಟ್ಟದಲ್ಲಿ ಬರಬೇಕು ಎನ್ನುವುದಾದರೆ ಆ ರೀತಿಯ ರಸ್ತೆಗಳು ಅಗತ್ಯ ಇವೆ ಎನ್ನುವುದು ಪ್ರಶ್ನೆ. ನಮಗೆ ನಾವೇ ಹೋಗಿಬರುವುದಕ್ಕೆ ಈ ರಸ್ತೆಗಳು ಸಾಕು.... ಇರುವ ಪಾಟ್‌ಹೋಲ್ಸ್ ಎಲ್ಲಾ ಮುಚ್ಚಿಕೊಂಡಿದ್ದರೆ ನಾವೇ ಹೋಗಿಬರುವುದಕ್ಕೆ ಸಾಕು.

(ಗೊಂದಲ)

ಶ್ರೀ ಸಿ.ಎಂ.ಉದಾಸಿ: ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಗೌರವಾನಿತ್ವ ಸದಸ್ಯರಲ್ಲಿ ಕೇಳಿಕೊಳ್ಳುವುದು ಇಷ್ಟೇ....

(ಗೊಂದಲ)

ಶ್ರೀ ಅಶೋಕ್ ಕಾಟ್ವೆ: ಅಧ್ಯಕ್ಷರೆ, ಈಗ ಮಹಾರಾಷ್ಟ್ರದಲ್ಲಿ, ಅದರಲ್ಲಿಯೂ

ಮುಂಬೈನಲ್ಲಿ ಶೇಕಡ 90 ರಷ್ಟು ಸೀಮೆಂಟ್ ರಸ್ತೆಗಳಿವೆ..

(ಗೊಂದಲ)

ಅಧ್ಯಕ್ಷರು: ಅದು ಹಾಗಲ್ಲ ಕಾಟ್ವೆರವರೆ, ಇಂಟರ್‌ನ್ಯಾಷನಲ್ ಸ್ಟಾಂಡರ್ಡ್‌ಗೆ ಮಾಡಬೇಕಾಗಿದ್ದರೆ ಅಷ್ಟು ಬೇಕಾಗುತ್ತದೆ,..

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರೆ, ನಮಗೆ ಸ್ವತಂತ್ರ ಬಂದು 50 ವರ್ಷವಾಯಿತು. ನಾವೀಗ ಸ್ವರ್ಣ ಮಹೋತ್ಸವ ಆಚರಿಸುವ ಸಂದರ್ಭಧಲ್ಲಿ ಇದ್ದೇವೆ, ನಮ್ಮ ಹರಿಜನರಿಗೆ ಹಾಗೂ ಗಿರಿಜನರಿಗೆ ಸರಿಯಾದ ರಸ್ತೆ, ದೀಪ ಇಲ್ಲ ಅವರನ್ನು ಹೇಳುವವರು ಕೇಳುವವರು ಯಾರೂ ಇಲ್ಲ, ಎಲೆಕ್ಟ್ರಿಕಲ್ ಟ್ರೈನ್ ಮಾಡಿ ಬಿಟ್ಟರೆ ಸಾಕು; ಈಗಿರುವ ರಸ್ತೆಯನ್ನು ಇನ್ನೊಂದು ನೂರು ಅಡಿ ಅಗಲ ಮಾಡಿದರೆ ಸಧ್ಯಕ್ಕೆ ಸಾಕು, ಆದ್ಯತೆ ಯಾವುದಕ್ಕೆ ಸಾರ್? ಇದರಿಂದಾಗಿ ಆ ಬಡಬಗ್ಗರು ಜಮೀನು ಎಲ್ಲವನ್ನೂ ಕಳೆದುಕೊಂಡು ಬಿಟ್ಟರೆ ಆ ರೈತರು ಬೀದಿ ಪಾಲಾಗುತ್ತಾರೆ..

ಅಧ್ಯಕ್ಷರು: ಆ ರಸ್ತೆ ಮಾಡಬೇಕೇ ಬೇಡವೇ ಎನ್ನುವುದು ಈ ಸದನಕ್ಕೆ ಬಿಟ್ಟ ವಿಚಾರ, ತಮಗೆ ಅಗತ್ಯವಿದ್ದರೆ ಇಟ್ಟುಕೊಳ್ಳಬಹುದು ಇಲ್ಲ ಅಂದರೆ ಬೇಡ....ಈ ರಸ್ತೆಗಳು ಹೇಗೆ ಇವೆ ಅದು ಏಕೆ ದುಬಾರಿಯಾಗುತ್ತಿದೆ ಎನ್ನುವ ವಿಚಾರವನ್ನು ಹೇಳಿದೆ. ತಮಗೆ ಒಪ್ಪಿಲ್ಲವಾದರೆ ಬೇಡ. ಅದಕ್ಕೆ ಇಷ್ಟಾಗುತ್ತದೆ ಎನ್ನುವುದನ್ನು ಹೇಳಿದೆ; ನಾನು ಇದನ್ನು ಮಾಡಿಕೊಳ್ಳಿ ಎಂದು ಸಮರ್ಥನೆ ಮಾಡಿ ಹೇಳುತ್ತಿಲ್ಲ. ಇವತ್ತು ನಾನು ಪೇಪರ್‌ನಲ್ಲಿ ಓದಿದೆ..

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾರೂ ಕೂಡ ರಸ್ತೆ ಬೇಡ ಎಂದು ಹೇಳುವುದಿಲ್ಲ. ಆ ಒಂದು ಹೌಸಿಂಗ್ ಸ್ಕೀಮ್ ಬೇಡ ಎಂದು ಹೇಳುತ್ತಿರುವುದು.

ಅಧ್ಯಕ್ಷರು: ದೇಶಪಾಂಡೆಯವರೇ, ಮದ್ರಾಸಿನಲ್ಲಿ ಮಾಸ್ ರ್‍ಯಾಪಿಡ್ ಸಿಸ್ಟಂ, ಹಾಗೂ ಎಲಿವೇಟೆಡ್ ರೈಲ್ ಸಿಸ್ಟಂ ಪ್ರಾರಂಭವಾಗಲಿದೆ. ನಾವು ಇಲ್ಲಿ ಮಾತನಾಡುತ್ತಲೇ ಇದ್ದೇವೆ. ಇವತ್ತಿಗೂ ಒಂದು ಬೆಂಗಳೂರಿನಲ್ಲಿ ಫ್ಲೈಓವರ್ ಆಗಲಿಲ್ಲ. ಹೈದರಾಬಾದ್‌ನಲ್ಲಿ ಅಲ್ಲಿನ ಮುಖ್ಯಮಂತ್ರಿ ಈಗಾಗಲೇ 8 ಫ್ಲೈಓವರ್‌ನ್ನು ಮುಗಿಸಿ ಇನ್ನು 14 ಫ್ಲೈಓವರ್‌ಗಳನ್ನು ಮುಗಿಸುವ ಹಂತದಲ್ಲಿ ಇದ್ದಾರೆ. ಮದ್ರಾಸ್, ಹೈದರಾಬಾದ್, ಕರ್ನಾಟಕ.. ಮಾಹಿತಿ ಗೊತ್ತಿರಲಿ ಎಂದು ಹೇಳಿದ..

(ಗೊಂದಲ)

+ ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಇವತ್ತು ಎಲೆವೇಟೆಡ್ ರೋಡ್‌ಗೆ 186 ಕೋಟಿ ರೂ.ಗಳು, ಫೆರಿಫರಲ್ ರೋಡ್‌ಗೆ 401, ಕೋಟಿ. ರೂ.ಗಳು ಬೆಂಗಳೂರು

ಲಿಂಕ್ ರೋಡ್‌ಗೆ 58 ಕೋಟಿ ರೂ.ಗಳು ಮೈಸೂರು ಲಿಂಕ್ ರೋಡ್‌ಗೆ 8 ಕೋಟಿ ರೂ.ಗಳು, ನಂತರ ಇಂಟರ್‌ಚೇಂಜಸ್ ಟೋಲ್ ಪ್ರಾಜೆಕ್ಟ್‌ಗೆ 256 ಕೋಟಿ.ರೂ.ಗಳು. ಹಾಗೂ ಜಮೀನು ಖರೀದಿ ಮಾಡುವ ಸಲುವಾಗಿ 170 ಕೋಟಿ ರೂ.ಗಳು ಮತ್ತು ಇನ್ನಿತರ ಕಂಟಿಜೆನ್ಸಿ ಸೇರಿ ಒಟ್ಟು ಎಲ್ಲಾ 2000 ಕೋಟಿ ರೂ.ಗಳಾಗುತ್ತವೆ. ತಮ್ಮ ಗಮನಕ್ಕೆ ಒಂದು ಅಂಶ ತರಬಯಸುತ್ತೇನೆ. ಅದೇನೆಂದರೆ 2000 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾದರೆ ಅವರಿಗೆ ಪ್ರತಿಯೊಂದು ದಿವಸಕ್ಕೆ ಬಡ್ಡಿ ಎಷ್ಟಾಗುತ್ತದೆ ಎಂಬುದನ್ನು ತಾವು ಆಲೋಚನೆ ಮಾಡಬೇಕು. 2000 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾದರೆ ಕನಿಷ್ಠ 6-7 ವರ್ಷಗಳು ಬೇಕಾಗಬಹುದು, ಇದಕ್ಕೆ ಸುಮಾರು 2000 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾದರೆ, ಅಪ್ರೂಡ್ ಇಂಟರೆಸ್ಟ್ ಕನಿಷ್ಠ ನನಗೆ ಅನ್ನಿಸುತ್ತದೆ ಸುಮಾರು 500 ರಿಂದ 800 ಕೋಟಿ ರೂ.ಗಳು ಆಗಬಹುದು. 2500 ರಿಂದ 2800 ಕೋಟಿ ರೂ.ಗಳಷ್ಟು ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. ಇದಕ್ಕೆ ತರಬೇಕಾದ ಬಡ್ಡಿಯನ್ನು ಹಿಡಿದಿದ್ದೇ ಆದರೆ ಒಂದು ದಿವಸಕ್ಕೆ ಅವರು ಕೊಡಬೇಕಾದ ಹಣಕ್ಕೆ ಸುಮಾರು ಒಂದು ಕೋಟಿ ರೂ.ಗಳಷ್ಟು ಕೊಡಬೇಕಾಗುತ್ತದೆ. ಅದಕ್ಕೆ ನಾವು ಟೋಲ್ ಯಾವ ರೀತಿ ಹಾಕಬಹುದು ಎಂಬುದರ ಬಗ್ಗೆ ಸಹಿತ ಈಗಾಗಲೇ ಒಂದು ರೀತಿಯನ್ನು ಅವರ ಗಮನಕ್ಕೆ, ಯಾವ ರೀತಿ ಮಾಡಬಹುದು ಎಂಬುದನ್ನು ಕೇಂದ್ರ ಸರ್ಕಾರದಲ್ಲಿ ಯಾವ ರೀತಿ ಇರಬಹುದು ವಾಹನಗಳ ಸಂಖ್ಯೆ ಎಷ್ಟು ಇವೆ ಎಂದು ಇವುಗಳೆನ್ನೆಲ್ಲಾ ಲೆಕ್ಕ ಹಾಕಿ 30 ವರ್ಷದವರೆಗೆ ಟೋಲ್ ಹಾಕುವಂತಹ ವ್ಯವಸ್ಥೆ ಮಾಡಿದ್ದೇವೆ. ಮೊದಲಿನ ವರ್ಷಕ್ಕೆ ಆ ಟೋಲ್‌ನಿಂದ ಬರಬೇಕಾದ ಆದಾಯ ಸುಮಾರು ಒಂದು ವರ್ಷಕ್ಕೆ 35 ಕೋಟಿ ರೂ.ಹಣ ಬಂದರೆ 11 ಕೋಟಿ ರೂ.ಗಳಷ್ಟು ಆಪರೇಷನ್ ಕಾಸ್ಟ್ ಬರಬಹುದು, 24 ಕೋಟಿ ರೂ.ಅವರಿಗೆ ಒಂದು ವರ್ಷಕ್ಕೆ ಲಾಭ ಬರುತ್ತದೆ. ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿ ಬಡ್ಡಿ ಆಗಬೇಕಾದರೆ ಅವರಿಗೆ 24 ಕೋಟಿ ರೂ. ಒಂದು ವರ್ಷಕ್ಕೆ 300-350 ಕೋಟಿ ಬಡ್ಡಿ ಆಗಬೇಕಾದರೆ ವರ್ಷಕ್ಕೆ 24 ಕೋಟಿ 30 ಲಕ್ಷ ರೂ. ಮೊದಲನೆ ವರ್ಷಕ್ಕೆ ಆದಾಯವಾಗಿ ಬಂದರೆ ನಾವು 5 ವರ್ಷಗಳ ನಂತರ 54 ಕೋಟಿ ರೂ. ಬರಬಹುದು ಎಂದು ಅಂದಾಜು ಮಾಡಿದ್ದೇವೆ. ಹೀಗಿರಬೇಕಾದರೆ ಅವರಿಗೆ ಟೋಲ್‌ನಿಂದ ರಸ್ತೆಗಳನ್ನು ಮಾಡುವುದಕ್ಕೆ ಸಾಧ್ಯತೆಇಲ್ಲ. ಅದಕ್ಕಾಗಿ ಅವರು 7 ಟೌನ್‌ಷಿಪ್ ಗಳನ್ನು ಮಾಡಬೇಕೆಂದು ಕೇಳಿದ್ದರು; ಅವರು 7 ಟೌನ್‌ಷಿಪ್‌ಗಳನ್ನು ಕೇಳಿದರೂ ಕೂಡ ಅವರು ಕೇಳಿರುವಂತಹ ಬೇರೆ ಬೇರೆ ಉದಾಹರಣೆ ಸಲುವಾಗಿ ಅವರು ಕೇಳಿದರು. ಆದರೆ ನಾವು 5 ಟೌನ್‌ಷಿಪ್‌ಗಳಿಗೆ ಮಾತ್ರ ಒಪ್ಪಿಕೊಂಡಿದ್ದೇವೆ. ಹೀಗೆ ಒಪ್ಪಿಗೊಂಡಿರುವ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಎಲ್ಲಾ ಜನರ ಅಭಿಪ್ರಾಯ ಏನೆಂದರೆ ಈ ಭೂಮಿಯನ್ನು ಕೊಡುತ್ತಿರುವುದರಿಂದ ಎಲ್ಲಾ ಭೂಮಿಯನ್ನು ಮಾರಾಟ ಮಾಡುವುದಕ್ಕೆ ಸಾಧ್ಯತೆ ಇದೆ ಎನ್ನುವಂಥ ಅಭಿಪ್ರಾಯ ಕೂಡ ನಿಮ್ಮ ಗಮನದಲ್ಲಿದೆ. ಆದರೆ ಆ ರೀತಿ ಆಗುವುದಿಲ್ಲ. ಇವತ್ತು ಒಟ್ಟು ಇಲ್ಲಿ ಸರ್ಕಾರದ ಜಮೀನು ಎಷ್ಟು ಇದೆ.. ರಸ್ತೆಗಳಿಗೆ ಬೇಕಾದ ಖರಾಜ್

ಲ್ಯಾಂಡ್ 1740 ಎಕರೆ ಅವರಿಗೆ ನಾವು ಕೊಡಬೇಕಾಗುತ್ತದೆ. ಅದಕ್ಕೆ ಸರ್ಕಾರ ಮಾರುಕಟ್ಟೆಯ ಬೆಲೆಯಲ್ಲಿ ಅವರು ಖರೀದಿ ಮಾಡಬೇಕು, ಅಕ್ವಿಸಿಷನ್ ಮಾಡಿ ಕೊಡುತ್ತಿದ್ದರೂ ಕೂಡ ಅವರು ಮಾರುಕಟ್ಟೆಯ ಬೆಲೆಯಲ್ಲಿ ತೆಗೆದುಕೊಳ್ಳಬೇಕು. ಡ್ರೈ ಲ್ಯಾಂಡ್‌ಗೆ 2936 ಎಕರೆ ರೈತರಿಂದ ಅಕ್ವಿಸಿಷನ್ ಮಾಡಬೇಕು ಅಥವಾ ನೇಗೋಷಿಯೇಷನ್ ಮಾಡಿಕೊಂಡು ಕನ್‌ಸೆಂಟ್ ಮೇಲಾದರೂ ಅವಾರ್ಡ್ ಮಾಡಿಸಿಕೊಳ್ಳಬಹುದು, ವೆಟ್ ಲ್ಯಾಂಡ್ 1183 ಎಕರೆ, ಗಾರ್ಡನ್ ಲ್ಯಾಂಡ್ 1140 ಎಕರೆ, 6990 ಎಕರೆ ರಸ್ತೆಗಳಿಗೆ ಬೇಕಾಗಿರುವುದು, ಟೌನ್‌ಶಿಫ್‌ಗಳಿಗೆ ಬೇಕಾಗಿರುವುದು 13 ಸಾವಿರ ಎಕರೆ 190 ಎಕರೆಯಲ್ಲಿ 5814 ಎಕರೆ ಖರಾಬ್ ಲ್ಯಾಂಡ್ ಬರುತ್ತದೆ, ಡ್ರೈಲ್ಯಾಂಡ್ 6881 ಎಕರೆ ಬರುತ್ತದೆ, ವೆಟ್ ಲ್ಯಾಂಡ್ 479 ಎಕರೆ ಬರುತ್ತದೆ, ಗಾರ್ಡನ್ ಲ್ಯಾಂಡ್ 16 ಎಕರೆ ಬರುತ್ತದೆ, ಹೀಗೆ 13194 ಎಕರೆ ಟೌನ್‌ಶಿಫ್‌ಗೆ ಬೇಕಾಗಿರುತ್ತದೆ. ಈ ರೀತಿ ಇರಬೇಕಾದರೆ ತಮಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅವರು ರಸ್ತೆಗಳಿಗಾಗಿ ಭೂಮಿಯನ್ನು ಉಪಯೋಗ ಮಾಡಿಕೊಳ್ಳುವುದು 6990 ಎಕರೆ, commmon facilities, infrastructure within the township limits,. ಇದಕ್ಕೆ 7300 ಎಕರೆ ಬೇಕು, ಇದನ್ನು ಮಾರಾಟ ಮಾಡುವುದಕ್ಕೆ ಬರುವುದಿಲ್ಲ. ಟೌನ್‌ಶಿಫ್ ಡೆವಲೆಪ್ ಆದಾಗ ಮಾತ್ರ 5900 ಎಕರೆ ಮಾರಾಟ ಮಾಡುವುದಕ್ಕೆ ಬರುತ್ತದೆ. ನಾವು ಇಲ್ಲಿ ಗಮನಿಸಬೇಕಾದ ಅಂಶ ಏನೆಂದರೆ ಇವತ್ತು ಬೆಂಗಳೂರಿನ ಜನಸಂಖ್ಯೆ 50 ಲಕ್ಷ ಇದ್ದರೆ 2002ನೇ ಇಸವಿಗೆ 80 ಲಕ್ಷ ಜನಸಂಖ್ಯೆ ಆಗುತ್ತದೆ ಎನ್ನುವಂಥ ಭಾವನೆ. ಈ ದಟ್ಟಣೆಯನ್ನು ಕಡಿಮೆ ಮಾಡಬೇಕಾದರೆ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಹೋಗಬೇಕಾದ ಜನ, ಯಾರು ಟೋಲ್ ಕೊಟ್ಟು ಹೋಗಬೇಕಾದ ಜನ ಅಲ್ಲಿ ವಾಸ ಮಾಡುವುದಕ್ಕೆ ಹೋಗಲು ಸಾಧ್ಯತೆ ಇದೆಯೇ ಹೊರತು ಉಳಿದವರು ಯಾರು ಹೋಗುವುದಕ್ಕೆ ಸಾಧ್ಯವಿಲ್ಲ. ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅದು ಬಿಟ್ಟು ಈ ರಸ್ತೆಗಳೇ ಬೇಡ ಎಂದಲ್ಲ,. ಈ ರಸ್ತೆಗಳನ್ನು ಸುಧಾರಣೆ ಮಾಡುವುದರ ಸಲುವಾಗಿ, ಈ ರಸ್ತೆಯಲ್ಲಿ ಹೋಗುವುದಕ್ಕೆ ಏನೇನು ಸಾಧ್ಯತೆ ಇರುತ್ತದೋ ಅದರ ಜೊತೆಗೆ ರಸ್ತೆಗಳಲ್ಲಿ ಹೋಗಬೇಕಾದ ಜನ ಕೇವಲ ಒಂದು ಮುಕ್ಕಾಲು ಗಂಟೆಯಲ್ಲಿ ಬೆಂಗಳೂರಿನಿಂದ ಮೈಸೂರನ್ನು ತಲುಪಿಸಬೇಕಾದ ವ್ಯವಸ್ಥೆ ಇರಬೇಕಾದರೆ, ಇದನ್ನು ನಾವು ಗಮನದಲ್ಲಿಟ್ಟುಕೊಂಡು ಈ ರಸ್ತೆಯನ್ನು ಸಮಯದ ಉಳಿತಾಯ ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ಉಳಿತಾಯ ಅದರ ಜೊತೆಗೆ ಆಧುನಿಕ ಸೌಲಭ್ಯಗಳಿರುವ ಪಟ್ಟಣಗಳಿಗೆ ಮಾಡಿದ್ದೇವೆ.. ಅಲ್ಲಿ ಏನಾಗಿದೆ ಎಂದರೆ ಎಲ್ಲಾ ಕಡೆ ಮನೆಗಳನ್ನು ಕಟ್ಟಿಸಿ ಕೊಡುತ್ತಾ ಇಲ್ಲ. ಮೊದಲನೆಯದು ವಾಣಿಜ್ಯ ಕೇಂದ್ರ, ಉಪನಗರ, ರಾಮನಗರ ಹತ್ತಿರ ಒಂದು ಹೆರಿಟೇಜ್ ಸೆಂಟರ್, ಮತ್ತೊಂದು ಕೈಗಾರಿಕಾ ಕೇಂದ್ರ, ಮತ್ತೊಂದು ಮಂಡ್ಯದ ಹತ್ತಿರ ವ್ಯವಸಾಯ ಕೇಂದ್ರ ಈ ರೀತಿ 5 ಕೇಂದ್ರಗಳನ್ನು ಮಾಡುತ್ತಿರುವುದರಿಂದ, ಇಲ್ಲಿ ಎಲ್ಲರಿಗೂ ಮನೆಗಳನ್ನು ಕಟ್ಟುವ ಸಲುವಾಗಿ ಕೊಡುತ್ತಿದ್ದಾರೆ ಎನ್ನುವಂಥ ಭಾವನೆಯನ್ನು ತಿಳಿದುಕೊಳ್ಳಬೇಕಾಗಿಲ್ಲ, ಇದು

ವಿವಿಧ ಕಾರ್ಯಕಲಾಪಗಳು ಇರುವುದರಿಂದ ಈ ಒಂದು ಯೋಜನೆಯನ್ನು ಜಾರಿಗೆ ತರುತ್ತಿದ್ದೇವೆ. ಬಹಳ ಜನಕ್ಕೆ ಇದರ ಬಗ್ಗೆ ಅನುಮಾನ ಇದೆ, ರಸ್ತೆಗಳನ್ನು ಮಾಡಬೇಕಾದರೆ ಸರ್ಕಾರ ಅವರು ಪಡೆಯತಕ್ಕ ಸಾಲಕ್ಕೆ ಗ್ಯಾರಂಟಿ ಕೊಡುತ್ತಿದ್ದಾರೆ ಎನ್ನುವಂತಹ ಮಾತನ್ನು ಸಭೆಯಲ್ಲಿ ವ್ಯಕ್ತಪಡಿಸಿದಿರಿ, ಅಂಥ ಯಾವುದೇ ವಿಚಾರ ಸರ್ಕಾರದ್ದು ಇಲ್ಲ. ಈ ರೀತಿಯ ವಿಚಾರಗಳನ್ನು ಇಡೀ ದೇಶಾದ್ಯಂತ ತರಬೇಕು ಎನ್ನುವ ಉದ್ದೇಶದಿಂದ ಕೇಂದ್ರ ಸರ್ಕಾರದವರು ಒಂದು ಯೋಜನೆಯನ್ನು ಮಾಡಿದ್ದಾರೆ. ನಾವು ರಾಷ್ಟ್ರೀಯ ಹೆದ್ದಾರಿ ಎಂದು ಮಾಡುತ್ತಾ ಇಲ್ಲ, ಕೇಂದ್ರ ಸರ್ಕಾರದವರು ಯಾವ ರೀತಿ ಮಾಡುತ್ತಿದ್ದಾರೆ ಎನ್ನುವುದನ್ನು ಸಹಿತ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅವರು ನ್ಯಾಷನಲ್ ಲೆವೆಲ್‌ನಲ್ಲಿ ಈ ರೀತಿ ಮಾಡುತ್ತಿದ್ದಾರೆ. Policy Guidelines for the private investment of Highway by Government of India for National High way. Land-free of cost for highway development; Grant upto 40% project cost; National High way amended including land for Housing and Urban Development activities; Land for housing will be treated as a integral part of the project; duty free import of high capacity equipment and machinery; ಕೇಂದ್ರ ಸರ್ಕಾರದವರು ಇಂಥ ಯೋಜನೆ ಮಾಡಿ ಇಡೀ ದೇಶಾದ್ಯಂತ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣದಲ್ಲಿ, ಇದಕ್ಕೆ ಅವರು ಪೂರಕವಾಗಿ ಸಹಕಾರ ಮಾಡಿದ್ದಾರೆ. ಇದರ ಜೊತೆಗೆ ಮೊದಲು ಐದು ವರ್ಷಗಳಲ್ಲಿ ಶೇಕಡಾ ನೂರರಷ್ಟು ಇನ್‌ಕಂ ಟ್ಯಾಕ್ಸ್ ರಿಯಾಯಿತಿ, ಮತ್ತು ನಂತರದ ವರ್ಷಗಳಲ್ಲಿ ಶೇಕಡಾ 30ರಷ್ಟು ಇನ್‌ಕಂ ಟ್ಯಾಕ್ಸ್ ರಿಯಾಯಿತಿ ಕೊಡಲಾಗುತ್ತದೆ. ಈ ರಸ್ತೆಗಳನ್ನು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಮಾಡಲಾಗುತ್ತಿದೆ. ಬೆಂಗಳೂರು ನಗರದಲ್ಲಿ ಇವತ್ತು ಅಪಾರವಾದ ಜನಸಂಖ್ಯೆ ಇರುವುದರಿಂದ, ಜನಸಂಖ್ಯೆಯ ಒತ್ತಡವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಬೇರೆ ಬೇರೆ ಕಡೆ 5 ಟೌನ್‌ಷಿಪ್‌ಗಳನ್ನೂ ಮಾಡಲಾಗುತ್ತಿದೆ. ಈ ಪ್ರಾಜೆಕ್ಟ್‌ನ್ನು ಮಾಡುವ ಸಲುವಾಗಿ ಎಲ್ಲಾ ವಿಷಯವನ್ನು ಪಾರದರ್ಶಕವಾಗಿ ಮಾಡಲಾಗಿದೆ. ಈ ವಿಷಯವನ್ನು ಸಚಿವ ಸಂಪುಟದ ಉಪ ಸಮಿತಿಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಿದ ನಂತರ ಅಗ್ರಿಮೆಂಟ್ ಮಾಡಿಕೊಳ್ಳಲಾಗಿದೆ. ಈ ವಿಷಯವನ್ನು ಎಲ್ಲಾ ಪಕ್ಷದ ಸದಸ್ಯರುಗಳೂ ನೋಡಬಹುದು. ಮಾನ್ಯ ಅಧ್ಯಕ್ಷರು ಯಾವ ದಿವಸವನ್ನು ನಿಗದಿ ಮಾಡುತ್ತಾರೋ ಅಂದು ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ತೋರಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮೊದಲು ಈ ಸದನಕ್ಕೆ ಮಾಹಿತಿ ಕೊಡಲಿ. ನಮಗೆ ಸೂಪರ್ ಹೈವೇ ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಲಾ ಡಿಪಾರ್ಟ್‌ಮೆಂಟಿನವರು ಇದಕ್ಕೆ ಏನು

ಒಪೀನಿಯನ್ ಕೊಟ್ಟಿದ್ದಾರೆಂದು ನಮಗೆ ಗೊತ್ತಾಗಬೇಕಲ್ಲಾ?

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ: ಅವರಿಗೆ ವರ್ಷಕ್ಕೆ 60 ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ. ಎಲ್ಲಿಂದ ಹಣವನ್ನು ತರಬೇಕೆಂದು ಹೇಳಿ? ಕೆಲಸ ಮಾಡುತ್ತೇವೆಂದರೆ, ಅದು ಬೇಡ, ಹೈ ವೇ ಬೇಡ ಎಂದು ಹೇಳುತ್ತಾರೆ.

(ಈ ಸಂದರ್ಭದಲ್ಲಿ ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಯಡಿಯೂರಪ್ಪನವರು ಸರ್ಕಾರದ ಮೇಲೆ ಆಪಾದನೆ ಮಾಡಿ ಹೊರಗಡೆ ಹೋಗಿರತಕ್ಕಂಥ ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಮಂತ್ರಿಮಂಡಲದ ಸದಸ್ಯರಾಗಿ ನಾವುಗಳು ಸುಮ್ಮನೆ ಇಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದರಲ್ಲಿ 10 ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ, ಲ್ಯಾಂಡ್ ಗ್ರಾಬಿಂಗ್ ಇದೆ, ಸರ್ಕಾರ ಏನೋ ಮಾಡುವುದಕ್ಕೆ ಹೊರಟಿದೆ, ಎಂದು ಅವರು ಬೇಜವಾಬ್ದಾರಿತನದಿಂದ ಕೊಟ್ಟಿರತಕ್ಕಂಥ ಹೇಳಿಕೆ ಇದಾಗಿದೆ. ಇವರುಗಳು ವಿದೇಶಕ್ಕೆ ಹೋಗಿಲ್ಲ. ಅಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ವಿದೇಶಕ್ಕೆ ಹೋದರೆ ಮಾತ್ರ ಗೊತ್ತಾಗುತ್ತದೆಯೇ ಇಲ್ಲದೆ ಇದ್ದರೆ ಗೊತ್ತಾಗುವುದಿಲ್ಲವೇ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ಹೇಳುವುದನ್ನು ಕೇಳುವಷ್ಟಾದಾದರೂ ಕನಿಷ್ಠ ಸೌಜನ್ಯವನ್ನು ಅವರು ತೋರಿಸಬೇಕು. ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡಲು ರಚಿಸಲಾಗಿದ್ದ ಸಂಪುಟದ ಉಪ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಆ ಸಮಿತಿಯು ಹಲವಾರು ತಿಂಗಳುಗಳಲ್ಲಿ ಹಣಕಾಸಿನ ಇಲಾಖೆ ಕಾರ್ಯದರ್ಶಿ, ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಯವರೊಡನೆ ಅನೇಕ ಸುತ್ತಿನ ಚರ್ಚೆ ನಡೆಸಿ ರಾಜ್ಯಕ್ಕೆ ಒಂದು ಒಳ್ಳೆಯ ಕೆಲಸ ಮಾಡಬೇಕೆನ್ನುವ ದೃಷ್ಟಿಯಿಂದ ಈ ಕೆಲಸ ಮಾಡಿದ್ದೇವೆ. ಅವರಿಗೆ, ಈ ಬಗ್ಗೆ ಏನು ಅಂಕಿಅಂಶಗಳು ಬೇಕೋ ಅವುಗಳೆಲ್ಲವನ್ನೂ ಸಹಿತ ನಾವು ಕೊಡುವುದಕ್ಕೆ ತಯಾರಿದ್ದೇವೆ. ಸಭಾಧ್ಯಕ್ಷರ ಕೊಠಡಿಯಲ್ಲಿ, ಇಂತಹ ವಿಷಯಗಳನ್ನು ಸಾಮಾನ್ಯವಾಗಿ ಮಾತನಾಡುವ ಸಂಪ್ರದಾಯದಿಂದ ಆ ರೀತಿ ಹೇಳಿದ್ದಾರೆಯೇ ಹೊರತು ಬೇರೆ ಉದ್ದೇಶದಿಂದ ಅಲ್ಲ. We want to be transparent. Any information you want, we are prepared to give and our

only concern is we want this project to come up.

ಶ್ರೀ ಆರ್.ವಿ.ದೇಶಪಾಂಡೆ: ನ್ಯಾಷನಲ್ ಹೈವೇ ಬಗ್ಗೆ ಗೌರ್ನಮೆಂಟ್ ಆಫ್ ಇಂಡಿಯಾದವರು ಒಂದು ಗೈಡ್ ಲೈನ್ ಕಳುಹಿಸಿದ್ದಾರೆ. ನಮ್ಮಲ್ಲಿ ಇನ್‌ಫ್ರಾಸ್ಟ್ರಕ್ಚರ್ ಬಿಲ್ಡ್ ಅಫ್ ಆಗದೇ ಇರುವುದರಿಂದ ಎಕ್ಸ್‌ಪ್ರೆಸ್ ಹೈವೇಗಳು, ಪೋರ್ಟ್ಸ್, ಏರ್ ಪೋರ್ಟ್‌ಗಳು ಯಾವ ಪ್ರಮಾಣದಲ್ಲಿ ಅಭಿವೃದ್ಧಿಯಾಗಬೇಕಾಗಿತ್ತೋ ಆ ಪ್ರಮಾಣದಲ್ಲಿ ಆಗಿಲ್ಲ. ಆದ್ದರಿಂದ ಎಕ್ಸ್‌ಪ್ರೆಸ್ ಹೈವೇ ಆಗುವುದಕ್ಕೆ ಲ್ಯಾಂಡ್‌ನ್ನು ಫ್ರೀಯಾಗಿ ಕೊಡಿ, ಟ್ಯಾಕ್ಸ್ ಕನ್‌ಸೆಷನ್ ಕೊಡಿ, ಕಮರ್ಷಿಯಲ್ ಆ್ಯಕ್ಟಿವಿಟೀಸ್ ಕೊಡಿ ಎಂಬುದು ನಮಗೆ ಗೌರ್ನಮೆಂಟ್ ಆಫ್ ಇಂಡಿಯಾದಿಂದ ನಮಗೆ ಗೈಡ್‌ಲೈನ್ ಬಂದಿವೆ. ಆ ಗೈಡ್‌ಲೈನ್ಸ್ ಪ್ರಕಾರ ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಅದರ ಪ್ರಕಾರ ಮಾಡಿಕೊಂಡಿರುವ ಅಗ್ರಿಮೆಂಟ್ ಮತ್ತು ಇತರ ಡಾಕ್ಯುಮೆಂಟ್‌ಗಳನ್ನು ಮಾನ್ಯ ಯಡಿಯೂರಪ್ಪನವರು ಕೇಳಿದರೆ ನಾವು ಕೊಡುತ್ತೇವೆ. ಇಂಥ ಪ್ರಾಜೆಕ್ಟ್‌ಗಳನ್ನು ಮಾಡುವುದೇ ಬೇಡವೆಂದು ಅವರಿಗೆ ಅನ್ನಿಸಿದರೆ, ಒಂದು ನಿರ್ಣಯವನ್ನು ಮಾಡಿ ನಮಗೆ ಯಾವ ಪ್ರಾಜೆಕ್ಟ್ ಬೇಡ ನಾವು ಹೀಗೆ ಇರುತ್ತೇವೆಂದು ತೀರ್ಮಾನ ಮಾಡಲಿ. ಮಾನ್ಯ ಅಧ್ಯಕ್ಷರು ಆವಾಗಲೇ ಹೇಳಿದ ಹಾಗೆ ಹೈದರಾಬಾದಿನಲ್ಲಿ 7 ಫ್ಲೈ ಓವರ್‌ಗಳು ರೆಡಿಯಾಗಿದ್ದಾವೆ, ಆದರೆ ನಾವು ಒಂದೂ ಮಾಡುವುದಕ್ಕಾಗಲಿಲ್ಲ. ಇದಕ್ಕೆ ನಾನೂ ಒಪ್ಪುತ್ತೇನೆ. ಫ್ಲೈಓವರ್ಸ್ ಮತ್ತು ರಿಂಗ್ ರೋಡ್ ಆಗಬೇಕಾದರೆ ಪ್ರತಿಯೊಂದಕ್ಕೂ ಟ್ರಾನ್ಸ್‌ಫೆರೆನ್ಸಿ ಇಲ್ಲವೆಂದು ಅಕ್ಯೂಸ್ ಮಾಡಿದರೆ ಯಾವ ಪ್ರಾಜೆಕ್ಟ್‌ಗಳೂ ಬರುವುದಿಲ್ಲ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಪ್ರಾಜೆಕ್ಟ್‌ಗಳ ಬಗ್ಗೆ ಯಾರೂ ಕೂಡ ಅಪೋಸ್ ಮಾಡಲಿಲ್ಲ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಬರಬೇಕೆಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಅದು ಬರಬೇಕಾದರೆ ಹೇಗೆ ಬರಬೇಕು? ಅದು ಬರಬೇಕಾದರೆ ಅಗತ್ಯ ಇರತಕ್ಕಂಥ 6 ಸಾವಿರದ 900 ಎಕರೆ ಜಮೀನು ಕೊಡುವುದಕ್ಕೆ ಯಾರೂ ಅಭ್ಯಂತರ ಮಾಡಲಿಲ್ಲ. ಆದರೆ ಅದಕ್ಕೆ ಲಿಂಕ್ ಮಾಡಿ ಇನ್ನೂ 13 ಸಾವಿರ ಎಕರೆ ಜಮೀನನ್ನು ಕಾನೂನು ಅಡಿಯಲ್ಲಿ, ಅದು ಅಕ್ವೈರ್ ಮಾಡುವುದಕ್ಕಾಗುವುದಿಲ್ಲ. ಇಂಡಸ್ಟ್ರೀಯಲ್ ಪರ್ಪಸ್‌ಗೆಂದು ಹೌಸಿಂಗ್ ಲ್ಯಾಂಡ್‌ನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. The Law Department has objected for that and the Law Department refused it.. ಏನೆಂದರೆ, ಈ 13 ಸಾವಿರ ಎಕರೆ ಜಮೀನನ್ನು ಹೌಸಿಂಗ್‌ಗೂ, ಎಕ್ಸ್‌ಪ್ರೆಸ್ ಹೈವೇಗೂ ಏನು ಲಿಂಕ್ ಮಾಡುತ್ತಿದ್ದೀರಿ ಅದು ಸರಿಯಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಅವರು ಹೇಳಿದ್ದರೂ ಪುನಃ ಇಲ್ಲ, ಅದಕ್ಕೂ ಇದಕ್ಕೂ ಲಿಂಕ್ ಮಾಡಬೇಕು, ಈ ಪ್ರಾಜೆಕ್ಟ್ ಪ್ರಾಫಿಟಬಲ್ ಆಗಬೇಕೆಂದು ಲಿಂಕ್ ಮಾಡತಕ್ಕಂಥ ಕೆಲಸ ಮಾಡಲಾಗಿದೆ. ಇದು ಲೇಟೆಸ್ಟ್ ಎಡಿಷನ್. ಅಂದರೆ, ಎಕ್ಸ್‌ಪ್ರೆಸ್ ಹೈವೇ ಐಡಿಯಾ ಏನಿತ್ತು? ಆ ಐಡಿಯಾ ಬಂದ ಮೇಲೆ 5 ವರ್ಷಗಳ ನಂತರ ಇದರ ಮೇಲೆ ಬೆಳಕು ಚೆಲ್ಲಿ ಇದೇ

ಸಂದರ್ಭದಲ್ಲಿ 5 ಸ್ಯಾಟ್‌ಲೈಟ್ ಟೌನ್ ಮಾಡಬೇಕೆಂದು ಮಾಡಲಾಗಿದೆ. ಈ ಸ್ಯಾಟ್‌ಲೈಟ್‌ಗೆ ಹೌಸಿಂಗ್ ಪರ್ಪ್‌ಸ್ ಎಂದರೆ ಸ್ವಲ್ಪ ವ್ಯತ್ಯಾಸವಾಗುತ್ತದೆಂದು ಪುನಃ ಇವರು ಏನು ಹೇಳಿದರು ಅದಕ್ಕೆ? ಒಂದು ಕಡೆ ಇಂಡಸ್ಟ್ರೀಯಲ್ ಎಸ್ಟೇಟ್, ಇನ್ನೊಂದು ಕಡೆ ವ್ಯವಸಾಯಕ್ಕೆ ಬೇಕಾದಂಥ ಎಸ್ಟೇಟ್, ಇನ್ನೊಂದು ಕಡೆ ಟೂರಿಸಂಗೆ ಬೇಕಾದಂಥಾದ್ದು, ಹೀಗೆ ಐದು ಬೇರೆ ಬೇರೆ ದೃಷ್ಟಿಯಲ್ಲಿ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಸ್ಯಾಟಲೈಟ್ ಟೌನ್ ಮತ್ತು ಇಂಡಸ್ಟ್ರೀಯಲ್ ಎಸ್ಟೇಟ್‌ಗೂ ವ್ಯತ್ಯಾಸವಿಲ್ಲವೆಂದು ಗೊತ್ತಾಯಿತು. ಎಕ್ಸ್‌ಪ್ರೆಸ್ ಹೈವೇ ಬರುವ ಬಗ್ಗೆ ಯಾರಿಗೂ ಅಬ್ಜಕ್ಷನ್ ಇಲ್ಲ. ಆದರೆ ವಯಬಿಲಿಟಿ ಸಲುವಾಗಿ ಒಂದು ಕಿಲೋಮೀಟರ್‌ಗೆ ಎಷ್ಟು ಬೇಕು? ಒಂದು ಕೋಟಿ? ಎರಡು ಕೋಟಿ? ಮೂರು ಕೋಟಿ? 4 ಕೋಟಿ ಆದರೆ ನೀವು ತೋರಿಸತಕ್ಕಂಥಾದ್ದು 18 ಕೋಟಿ; ಎಸ್ಕಲೇಷನ್ ಕಾಸ್ಟ್ ಏನು ತೋರಿಸುತ್ತಿದ್ದೀರಿ ಅದು ಕೂಡ ಸಂಶಯಕ್ಕೆ ಆಸ್ಪದವಾಗಿದೆ. ಇದರಲ್ಲಿ ಟ್ರಾನ್ಸಪರೆನ್ಸಿ ಇದೆಯೆಂದು ಅವರು ಹೇಳುವಾಗ ಇದರ ಬಗ್ಗೆ ವಿಚಾರ ಮಾಡಲು ಸದನದ ಕಮಿಟಿ ಮಾಡಲು ಅವರಿಗೆ ಏನು ತಾಪತ್ರಯ? ಈ ರೀತಿ ಮಾಡಿದರೆ ಎಲ್ಲರಿಗೂ ಇರತಕ್ಕಂಥ ಸಂಶಯ ನಿವಾರಣೆಯಾಗಿ ಪ್ರಾಜೆಕ್ಟ್ ಕ್ಲಿಯರ್ ಆಗುತ್ತದೆ. ಮತ್ತು ಪರ್ ಕಿಲೋಮೀಟರ್ ಎಷ್ಟು ಖರ್ಚು ಬರುತ್ತದೆಂದು ಗೊತ್ತಾಗುತ್ತದೆ. ಎಷ್ಟು ಎಕರೆ ಲ್ಯಾಂಡ್ ಬೇಕಾಗುತ್ತದೆಂದು ನಿರ್ದಿಷ್ಟವಾಗಿ ಗೊತ್ತಾಗುತ್ತದೆ. ಈ ಎರಡು ಸಾವಿರ ಕೋಟಿ ರೂಪಾಯಿ ಮೇಲೆ ಬಡ್ಡಿ ಎಷ್ಟು? ಇವರು ಏನು ಹಣವನ್ನು ಸಾಲವಾಗಿ ತೆಗೆದುಕೊಳ್ಳುತ್ತಿದ್ದಾರೋ ಅದಕ್ಕೆ ಫಾರಿನ್ ಕಂಟ್ರಿಯವರು 7 ಪರ್ ಸೆಂಟ್‌ಗಿಂತ ಹೆಚ್ಚು ಬಡ್ಡಿ ಹಾಕುವುದಿಲ್ಲ. ಆದರೆ, ಇಲ್ಲಿ 22 ಪರ್ ಸೆಂಟ್ ನಿಂದ 24 ಪರ್‌ಸೆಂಟ್‌ವರೆಗೆ ವರ್ಕ್‌ಔಟ್ ಮಾಡಲಾಗುತ್ತಿದೆ. ಅದಕ್ಕಾಗಿ ಈ ವಿಷಯವೆಲ್ಲಾ ಕಮಿಟಿ ಮುಂದೆ ಬಂದು ಡಿಸ್ಕಸ್ ಆಗಲಿ. ಇದರ ಬಗ್ಗೆ ಸರ್ಕಾರದವರು ಕನ್ವಿನ್ಸ್ ಮಾಡಲಿ. ಕನ್ವಿನ್ಸ್ ಆದರೆ ಈ ಪ್ರಾಜೆಕ್ಟ್ ಮಾಡುವುದಕ್ಕೆ ಯಾರದ್ದೂ ಅಭ್ಯಂತರವಿಲ್ಲ. ಇಲ್ಲಿ ಏಕೆ ಸಂಶಯ ಬರುತ್ತದೆಂದರೆ, ಒಂದು ಕಿಲೋಮೀಟರ್‌ಗೆ 5 ಕೋಟಿ ಎಸ್ಟಿಮೇಟ್ ಮಾಡಿದರೂ ಪರವಾಗಿಲ್ಲ, ಆದರೆ, 18 ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಲಾಗಿದೆ. ಸದನದ ಸಮಿತಿಯು ಅಧ್ಯಕ್ಷರು ಸರ್ಕಾರದವರು ಸೂಚಿಸಿದಂಥವರೇ ಇರಲಿ. ಈ ಸದನದ ಸಮಿತಿ ಮುಂದೆ ಈ ಎಲ್ಲಾ ವಿಷಯವನ್ನು ಇಟ್ಟು ಡಿಸ್ಕಸ್ ಮಾಡಿದನಂತರ ಅವರು ಕೊಡುವ ರಿಪೋರ್ಟ್ ಆಧಾರದ ಮೇಲೆ ಕೆಲಸ ಮಾಡಿದರೆ ಸಂಶಯವೂ ಬರುವುದಿಲ್ಲ, ತೊಂದರೆಯೂ ಆಗುವುದಿಲ್ಲವೆಂದು ಹೇಳುತ್ತೇನೆ. You constitute a Joint House Committee.

+ ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ಸದನದ ಸಮಿತಿಯು ಸಂಪೂರ್ಣವಾಗಿ ಚರ್ಚೆಮಾಡಿ ಒಂದು ಪ್ರಾಜೆಕ್ಟ್‌ನ್ನು ಕ್ಲಿಯರ್ ಮಾಡುವುದಿದ್ದರೆ, ಸದನದ ಸಮಿತಿಯ ಮುಖಾಂತರ ಈ ಒಂದು ಟೆಕ್ನಿಕ್ಯಾಲಿಟಿಯನ್ನು, ಮತ್ತು ಅಲ್ಲಿರತಕ್ಕಂಥ ವಿಚಾರಗಳನ್ನು

ಎತ್ತಿಕೊಂಡು, ಅವರು ವಿಚಾರ ಮಾಡಿ, ಇದು ಫೀಸಿಬಲ್, ಇದು ಫೀಸಿಬಲ್ ಅಲ್ಲ ಎಂದು ಹೇಳುವುದಾದರೆ, ನಾನು ಹೇಳುತ್ತೇನೆ, ಮುಂದೆ ಟೆಕ್ನೋಕ್ರಾಟ್ಸ್ ಬೇಕಾಗಿಲ್ಲ, ಕನ್ಸಲ್‌ಟೆನ್ಸಿ ಬೇಕಾಗಿಲ್ಲ, ಎಲ್ಲವನ್ನೂ, ನಾವು ಸದನದಲ್ಲಿಯೇ ಕುಳಿತುಕೊಂಡು ಮಾಡಬಹುದು. ಆದರೆ ಒಂದು ವಿಚಾರವನ್ನು ಮಾತ್ರ ತಾವು ದಯಮಾಡಿ ವಿಚಾರ ಮಾಡಬೇಕು. ಇದು ಸಾಧಾರಣ ಒಂದೂವರೆ ವರ್ಷದಿಂದ ನಡೆಯುತ್ತಾ ಇದೆ. As much as more than 17-18 meetings have taken place. The Law Department was very actively involved. Finance department was very actively involved. ಅವರು ಕೊಟ್ಟಿರತಕ್ಕಂಥ international clauses of the agreement, because a foreign firm is involved, ಆ ಸಂದರ್ಭದಲ್ಲಿ ಬಂದಾಗ then we had to discuss that issue. Nearly, 17 meetings were taken up. Twice or thrice it came to a dead end and ultimately they said" we are going to walk out, we do not want any such project" ಎಂದು ಹೇಳತಕ್ಕಂಥ ಪರಿಸ್ಥಿತಿಯು ನಿರ್ಮಾಣವಾಯಿತು. Then again we had to look into the whole matter afresh. ಹಾಗೆ ನಾವು ಮಾಡಿಯಾದ ಮೇಲೆ ಅವರು ಎಲ್ಲಾ ಅಗ್ರಿಮೆಂಟ್‌ನ್ನು ತಂದು in the best interests of the State ಈಗ ನಮಗೆ ಒಂದು ಕಡೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಬೇಕೆಂದು ಹೇಳುತ್ತೇವೆ. ಬೆಂಗಳೂರು-ಮೈಸೂರು ಹೆದ್ದಾರಿಯನ್ನು ಒಳ್ಳೆಯದಾಗಿ ಮಾಡಬೇಕೆಂದು ಹತ್ತಾರು ವರ್ಷಗಳಿಂದ ಮಾಡಬೇಕೆಂದು ಚಿಂತನೆ ಮಾಡುತ್ತಾ ಇದ್ದೇವೆ. ಆದರೆ ಇಲ್ಲಿಯವರೆಗೆ ಏನೂ ಗಮನ ಹರಿಸಿಲ್ಲ. ಕಡೆಗೆ ಯಾವನೋ ಒಬ್ಬ ಬರುತ್ತಾನೆ, ತಾನು ಖರ್ಚು ಮಾಡುತ್ತೇನೆ ಎಂದು ಹೇಳುತ್ತಾನೆ. ಅಂಥವರಿಗೆ ಬೇಕಾದ safeguards inbuilt ಮಾಡಿಕೊಂಡು ಮಧ್ಯದಲ್ಲಿರತಕ್ಕಂಥ ಸ್ಯಾಟ್‌ಲೈಟ್ ಟೌನ್ಸ್, ಸ್ಯಾಟ್‌ಲೈಟ್‌ಟೌನ್ಸ್‌ನಲ್ಲಿ satellite town means not only houses, ಅದರಲ್ಲಿ ಅಗ್ರಿಕಲ್ಚರ್ ಬರುತ್ತದೆ. ಹಾರ್ಟಿಕಲ್ಚರ್ ಬರುತ್ತದೆ, ಪರಿಸರ ಬರುತ್ತದೆ, ಇಂಡಸ್ಟ್ರೀಯಲ್ ಏರಿಯಾವೂ ಬರುತ್ತದೆ. The total area of 13000 acres out of 20000 acres, of it 7000 acres is for formation of roads. ಬಾಕಿ ಇರತಕ್ಕಂಥ 13 ಸಾವಿರ ಎಕರೆಗಳಲ್ಲಿ ಟೌನ್‌ಶಿಫ್‌ನ್ನು ಬಿಲ್ಡ್‌ಅಫ್ ಮಾಡಲು ಇರತಕ್ಕಂಥ ರೋಡ್‌ಫಾರ್ಮೇಷನ್‌ಗೆ ಸುಮಾರು 6 ಸಾವಿರ ಎಕರೆಗಳು ಬೇಕಾಗುತ್ತವೆ. ಟೌನ್‌ಶಿಫ್‌ನಲ್ಲಿ ರೋಡ್‌ಫಾರ್ಮೇಷನ್ ಮಾಡಬೇಕಲ್ಲವೇ? ಬಾಕಿ ಇರತಕ್ಕಂಥ ಇನಫ್ರಾಸ್ಟ್ರಕ್ಚರ್ಸ್‌ನ್ನು ಫಾರ್ಮೇಷನ್ ಮಾಡಲು ಇರತಕ್ಕಂಥಾದ್ದು 5500 ಎಕರೆಗಳು ಮಾತ್ರ. This is the picture. ಆದ್ದರಿಂದ ನಾನು ಹೇಳುತ್ತಾ ಇದ್ದೇನೆ, ಸದನದ ಸಮಿತಿಯು ಚರ್ಚೆ ಮಾಡಿ ಅಲ್ಲಿರತಕ್ಕಂಥ ಟೆಕ್ನಿಕ್ಯಾಲಿಟಿಗಳನ್ನು ನೋಡಿಕೊಂಡು ನಾವು ಇಲ್ಲಿ ಉತ್ತರಕೊಡುವಷ್ಟು ಮತ್ತು ಆ ಪ್ರಾಜೆಕ್ಟನ್ನು ಕ್ಲಿಯರ್

ಮಾಡುವಷ್ಟು ಎಕ್ಸ್‌ಪರ್ಟ್ಸ್ ನಮಗೆ ಇಲ್ಲ. ಆದರೆ ಟ್ರಾನ್ಸ್‌ಪರೆನ್ಸಿ ಏನು ಎಂದು ನೋಡಬೇಕೆಂದರೆ Sir, a video projection is already there. Any time you can arrange for a video projection. ಆ ವಿಡಿಯೋ ಪ್ರಾಜೆಕ್ಷನ್‌ನ್ನು ತಾವು ದಯಮಾಡಿ ನೋಡಿ. Any time you can arrange. I agree for that. ನೀವು ಲೋಕಾರೂಢಿಯಾಗಿ ಸರಕಾರದ ಮೇಲೆ ಈ ರೀತಿಯಾಗಿ ಮಾತನಾಡತಕ್ಕಂಥಾದ್ದು ಹೌದು. 10 ಸಾವಿರ ಕೋಟಿ ರೂ.ಗಳ ವ್ಯವಹಾರ. ಅದಕ್ಕೆ ಖರ್ಚು ಬರುತ್ತಾ ಇರತಕ್ಕಂಥಾದ್ದು 2 ಸಾವಿರ ಕೋಟಿ ರೂ.ಗಳು. ಆದರೆ ಅಲ್ಲಿ 10 ಸಾವಿರ ಕೋಟಿ ರೂ.ಗಳ ಅವ್ಯವಹಾರ ಎಂದು ಹೇಳಿದರೆ ಹೇಗೆ? ಒಂದು ಸಾರಿ ಹೇಳಿದರು. ನ್ಯಾಶನಲ್‌ಗೇಮ್ಸ್‌ಗೆ ಒಟ್ಟಾರೆ ಖರ್ಚಾಗಿರತಕ್ಕಂಥಾದ್ದು 100 ಕೋಟಿರೂ.ಗಳು. ಹೀಗೆ ನೂರು ಕೋಟಿ ರೂ.ಗಳು ಖರ್ಚಾಗಿರತಕ್ಕಂಥ ಸಂದರ್ಭದಲ್ಲಿ 150 ಕೋಟಿ ರೂ.ಗಳ ಅವ್ಯವಹಾರ ಎಂದು ಇದೇ ಸದನದಲ್ಲಿ ಹೇಳಿದರು. The total amount spent on the National Games infrastructure was Rs. 100 crores. 150 ಕೋಟಿ ರೂ.ಗಳ ಅವ್ಯವಹಾರ ಎಂದು ಇದೇ ಸದನದಲ್ಲಿ ಹೇಳಿದರು. ಈಗ ಮತ್ತೆ ಎರಡು ಸಾವಿರ ಕೋಟಿ ರೂ.ಗಳ ಕೆಲಸಕ್ಕೆ 10 ಸಾವಿರ ಕೋಟಿ ರೂ.ಗಳ ಅವ್ಯವಹಾರ ಎಂದು ಹೇಳಿದರೆ sitting in the opposition, making such reckless, and irresponsible statements would not be fit the position you occupy. Try to be more careful while making such observations.

SRI M.MALLIKARJUN KHARGE:- That is why we are asking.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಪತಿಯವರೇ, ಇದರಲ್ಲಿ ಮುಗುಮ್ ಆಗಿ ಮಾತನಾಡತಕ್ಕಂಥಾದ್ದು ಏನಿಲ್ಲ. If he wants to see, let them see the video projection.

SRI M.MALLIKARJUN KHARGE:- You agree for a Joing House Committee. ನೀವು ಒಪ್ಪುವುದಿಲ್ಲ ಅಂದರೆ ಇಲ್ಲಿ ಸಂಶಯಕ್ಕೆ ಆಸ್ಪದ ಬರುತ್ತದೆ.

ಶ್ರೀ ಸಿ.ಎಂ.ಉದಾಸಿ: ನಾವು ಏನು ವಿವರಗಳು ಬೇಕೋ ಅದನ್ನು ಹಾಜರು ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು 2000 ಕೋಟಿ ರೂ.ಗಳ ಪ್ರಾಜೆಕ್ಟ್. Not Rs.100 Crores or Rs. 50 Crores. It involves Rs.2000

crores. They want 20000 acres land.

ಶ್ರೀ ಆರ್.ವಿ.ದೇಶಪಾಂಡೆ: ಯಾವ ರಾಜ್ಯದಲ್ಲಿ, ಯಾವ ದೇಶದಲ್ಲಿ ಇಂಥ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಲು ಜಾಯಿಂಟ್‌ಸೆಲೆಕ್ಟ್ ಕಮಿಟಿಯನ್ನು ಮಾಡಿದ್ದಾರೆ? ಎಲ್ಲಿ ಮಾಡಿದ್ದಾರೆ ಎಂಬ ಉದಾಹರಣೆ ಕೊಡಿ. ರೆಕಾರ್ಡ್ಸ್ ನೋಡಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಇಲ್ಲಿಯವರೆಗೆ 10 ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಿರಬೇಕು. ಆ ಹತ್ತು ಪ್ರಾಜೆಕ್ಟ್‌ಗಳಿಗೆ ಎಂದಾದರೂ ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ ಎಂದು ಕೇಳಿದ್ದಾರೋ? ಇದಕ್ಕೆ ಏಕೆ ಕೇಳಿದ್ದಾರೆ ಅಂದರೆ 2000 ಕೋಟಿ ರೂ.ಗಳ ವೆಚ್ಚದಲ್ಲಿ ಕೇವಲ 110 ಕಿಮೀ. ಉದ್ದದ ರಸ್ತೆ ಮಾಡಲು ಬಂದಂಥ ಸಂದರ್ಭದಲ್ಲಿ ಮತ್ತು ಆದಕ್ಕೆ ಕಂಪ್ಯಾರಿಸನ್ ಸ್ಟೇಟ್‌ಮೆಂಟ್ ಮತ್ತು ಕೆಲಸ ಮಾಡತಕ್ಕಂಥವರಿದ್ದಾಗ....

SRI M.C.NANAIAH:- We are not investing that money. A private enterpreneur is spending the money.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾರೋ ಖರ್ಚು ಮಾಡುತ್ತಾರೆ ಅಂದರೆ ಅದರ ಅರ್ಥ ಏನು?

ಶ್ರೀ ಎಂ.ಸಿ.ನಾಣಯ್ಯ: ಇದಕ್ಕೆ ಸರಕಾರದವರೇ ಹಣವನ್ನು ಖರ್ಚುಮಾಡುತ್ತಿದ್ದಾರೆ ಎಂಬ ಭಾವನೆಯಲ್ಲಿ ತಾವು ಮಾತನಾಡುತ್ತಿದ್ದೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವಾಗ ನೀವು ಜಾಯಿಂಟ್‌ಸೆಲೆಕ್ಟ್ ಕಮಿಟಿಯನ್ನು ಮಾಡಲು ತಯಾರಾಗಿಲ್ಲ ಅಂದರೆ ಟ್ರಾನ್ಸ್‌ಫರೆನ್ಸಿ ಇದರಲ್ಲಿ ಇಲ್ಲ, ಆ ಟ್ರಾನ್ಸ್‌ಫರೆನ್ಸಿ ತೋರಿಸಲು ತಾವು ತಯಾರಾಗಿಲ್ಲ, ಇದನ್ನು ಮುಚ್ಚಿಡ ಬೇಕು, ಇದರಲ್ಲಿ ಇರುವ ಅಂಡರ್‌ಸ್ಟ್ಯಾಂಡಿಂಗ್‌ನ್ನು ತೋರಿಸ ಬಾರದು ಎಂಬ ಉದ್ದೇಶ ನಿಮ್ಮಲ್ಲಿದ್ದರೆ ನಾವು ಇದನ್ನು ಪ್ರತಿಭಟಿಸ ಬೇಕಾಗುತ್ತದೆ. ನಾವು ವಾಕ್‌ಔಟ್ ಮಾಡುತ್ತೇವೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರುಗಳವರು ಸಭಾತ್ಯಾಗ ಮಾಡಿದರು)

ಶ್ರೀ ಸಿ.ಎಂ.ಉದಾಸಿ: ಮಾನ್ಯ ಸಭಾಧ್ಯಕ್ಷರೇ, ಈ ಯೋಜನೆ ಅಗ್ರಿಮೆಂಟ್ ಆದಮೇಲೆ ಕೇರಳರಾಜ್ಯದ ಲೋಕೋಪಯೋಗಿ ಸಚಿವರು ಕರ್ನಾಟಕಕ್ಕೆ ಬಂದಿದ್ದರು. ಅವರಿಗೆ ನಾವು ಇದನ್ನು ಪ್ರಸೆಂಟೇಷನ್ ಮಾಡಿದಾಗ ಅವರು ಇದು ಅತ್ಯಂತ ಉಪಯುಕ್ತವಾದ ಯೋಜನೆ ಎಂದು ಸ್ವಾಗತ ಮಾಡಿದ್ದಾರೆ- ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು 3.30ರ ವರೆಗೆ ಮುಂದೂಡುತ್ತೇನೆ.